# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 84 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 26.09.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 84 • PRGI No:KARKAN/2023/88055 • VIJAYANAGARA • 26.09.2024 • Thursday • Page:04 • Rs:2



**ಒಳ ಪುಟಗಳಲ್ಲಿ**

**ನೀವ್ಯಾರು ಕಷ್ಟಪಟ್ಟು ಓದಬೇಡಿ... ವಿದ್ಯಾರ್ಥಿಗಳೊಂದಿಗೆ.....**
ಪುಟ 3 ರಲ್ಲಿ
– ಗಾಯತ್ರಿ ಕುಲಕರ್ಣಿ, ಲೇಖಕರು

**ಕವಲುದಾರಿಯ ಕಷ್ಟ**
ಪುಟ 2 ರಲ್ಲಿ– ರಹಮತ್ ತರೀಕೆರೆ
ಸಂಸ್ಕೃತಿ ಚಿಂತಕರು

**ವರ್ಡ್ಸ್ ದಟ್ ಹರ್ಟ್ ವರ್ಡ್ಸ್ ದಟ್ ಹೀಲ್...**
ಪುಟ 2 ರಲ್ಲಿ
–ವೀಣಾ ಹೇ.ಗೌ.ಪಾ.ಲೇಖಕರು


## ಸೂರ್ಯಕಾಂತಿ ಖರೀದಿಗೆ ಹೆಚ್ಚುವರಿ ಕೇಂದ್ರ

### ಪ್ರತಿ ಕ್ವಿಂಟಾಲ್‌ಗೆ ರೂ. 7,280 | ಜಿಲ್ಲೆಯಲ್ಲಿ 4+2 ಕೇಂದ್ರಗಳ ಸ್ಥಾಪನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿ ಮಾಡಲು ವಿಜಯ ನಗರ ಜಿಲ್ಲೆಯಲ್ಲಿ ಹೆಚ್ಚುವರಿಯಾಗಿ 2 ಖರೀದಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ.

ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ನಿಯಮಿತ (ಕೆ.ಒ.ಎಫ್.) ಚಿತ್ರದುರ್ಗ, ವಿಭಾಗೀಯ ಕಚೇರಿ ವಿಜಯನಗರ ಇವರಿಂದ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಸರ್ಕಾರದ ನಿಗದಿ ಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ. 7,280 ರಂತೆ ರೈತರಿಂದ ಖರೀದಿಗಾಗಿ 4 ಖರೀದಿ ಕೇಂದ್ರಗಳನ್ನು ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪನೆಮಾಡಲಾಗಿದ್ದು, ಹೆಚ್ಚುವರಿಯಾಗಿ 2 ಖರೀದಿ ಕೇಂದ್ರಗಳನ್ನು ಜಿಲ್ಲೆಯ ಹೊಸಪೇಟೆ ಮತ್ತು ಕೋಗಳಿ ಗ್ರಾಮದಲ್ಲಿ ಪ್ರಾರಂಭಿಸಲಾಗುತ್ತಿದೆ.

**ಖರೀದಿ ಕೇಂದ್ರ ವಿವರ:** ಕೊಟ್ಟೂರು ತಾಲೂಕಿನ ಕೋಗಳಿ ಗ್ರಾಮ. ಕಾರ್ಯದರ್ಶಿ ಶಿವಣ್ಣ ಮೊ.ನಂ: 9945073015, ಹೊಸಪೇಟೆಯ ಅಂಬೆಡ್ಕರ್ ಸರ್ಕಲ್ ಹತ್ತಿರ. ಕಾರ್ಯದರ್ಶಿ ಹುಲುಗಪ್ಪ ಮೊ.ನಂ: 9448474752. ರೈತರು ಈ ಖರೀದಿ ಕೇಂದ್ರಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಣ್ಣುಮಕ್ಕಳು ನಿರೀಕ್ಷೆಯ ಸಾಧನೆಯ ಶಿಖರವೇರಲು ಶಿಕ್ಷಣ ಪಡೆಯಬೇಕು

### ಜಿಲ್ಲಾ ಮಟ್ಟದ ಜಾಗೃತಿ ಜಾಥಾ ಸಮಾವೇಶದಲ್ಲಿ ಎಸ್ಪಿ ಡಾ.ಶೋಭಾರಾಣಿ ವಿ.ಜೆ ಹೇಳಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎನ್ನುವ ನಾಣ್ಣುಡಿಯಂತೆ ಹೆಣ್ಣು ಮಕ್ಕಳು ಶಿಕ್ಷಣ ಪಡೆದಾಗ ಮಾತ್ರ ಸಮಾಜದಲ್ಲಿ ಸಾಧನೆಯ ಶಿಖರವೇರಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಹೇಳಿದರು.

ರೀಡ್ಸ್ ಸಂಸ್ಥೆ, ಮಕ್ಕಳ ವಿಶೇಷ ಪೊಲೀಸ್ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಬಿಡಿಎಎ ಸಭಾಗಂಣದಲ್ಲಿ ಬುಧವಾರ ಏರ್ಪಡಿಸಿದ್ದ ಬಾಲ್ಯ ವಿವಾಹ ನಿಷೇಧ, ಲಿಂಗ ತಾರತಮ್ಯ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಹದಿ ಹರೆಯದ ಹೆಣ್ಣುಮಕ್ಕಳ ಸಮಾವೇಶ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರ್‌ಟಿಇ–2009 ಕಾಯ್ದೆ ಪ್ರಕಾರ ಶಿಕ್ಷಣ ಆಯ್ಕೆಯಲ್ಲ ಅದು ನಮ್ಮ ಹಕ್ಕು. ಪ್ರತಿಯೊಬ್ಬ ಮಹಿಳೆಯೂ ಶಿಕ್ಷಣ ಪಡೆದು ಆರ್ಥಿಕ, ಸಾಮಾಜಿಕವಾಗಿ ಸಬಲೀಕರಣವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕು ಎಂದು ಹೇಳಿದರು.

ಯೌವನ ಸಮಯದಲ್ಲಿ ಹೆಣ್ಣು ಮಕ್ಕಳು ಯಾವುದೇ ತರಹದ ಆಕರ್ಷಣೆಗೆ ಒಳಗಾಗಿ ತಪ್ಪು ಹಾದಿ ಹಿಡಿಯದೇ, ಜೀವನದ ತಾತ್ಪರ್ಯ ಅರಿತುಕೊಂಡು ಮನೆಗೆ–ಊರಿಗೆ, ಮುಖ್ಯವಾಗಿ ಪೋಷಕರಿಗೆ ಕೀರ್ತಿ ತರುವ ಹಾಗೆ ಉತ್ತಮ ಸಾಧನೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬಾಲ್ಯ ವಿವಾಹ, ಲಿಂಗ ತಾರತಮ್ಯ, ಮಕ್ಕಳ ಮೇಲಿನ ದೌರ್ಜನ್ಯಗಳನ್ನು ನಿರ್ಮೂಲನೆ ಮಾಡಲು ಶಿಕ್ಷಣವು ಮಾರ್ಗವಾಗಿದ್ದು, ಉತ್ತಮ ವಿದ್ಯಾಭ್ಯಾಸದಿಂದ ಮಾತ್ರ ಸಾಧ್ಯ ಎಂದರು.

ಮಕ್ಕಳ ರಕ್ಷಣೆಗಾಗಿ ಪ್ರತಿ ಜಿಲ್ಲೆಯಲ್ಲಿಯೂ ಡಿವೈಎಸ್‌ಪಿ, ಪಿಎಸ್‌ಐ, ಮಹಿಳಾ ಪೊಲೀಸ್ ಪೇದೆ ಒಳಗೊಂಡಂತೆ ವಿಶೇಷ ಮಕ್ಕಳ ಪೊಲೀಸ್ ಘಟಕವಿದ್ದು, ಬಾಲ್ಯವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ ಕಂಡುಬಂದಲ್ಲಿ ಮಾಹಿತಿ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣ ಹೆಚ್ಚಾಗುತ್ತಿದ್ದು, ಬಾಲ್ಯ ವಿವಾಹವು ಕಾನೂನು ಬಾಹಿರವಾಗಿದೆ. ಈ ಕುರಿತು ತಮ್ಮ ಮನೆ–ಕುಟುಂಬಗಳಲ್ಲಿ ಮನವರಿಕೆ ಮಾಡಬೇಕು ಎಂದರಲ್ಲದೇ, ಮಕ್ಕಳ ಮೇಲೆ ದೌರ್ಜನ್ಯ, ಬಾಲ್ಯವಿವಾಹ ಹಾಗೂ ಇತರೆ ಸಮಸ್ಯೆ ಇದ್ದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ 1098, ಮಹಿಳಾ ಸಹಾಯವಾಣಿ ಸಂಖ್ಯೆ 181 ಹಾಗೂ ತುರ್ತು ಸಹಾಯವಾಣಿ ಸಂಖ್ಯೆ 112 ಗೆ ಕರೆಮಾಡಿ ಮಾಹಿತಿ ನೀಡಬಹುದು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ >>3

## ಮಕ್ಕಳ ಪೌಷ್ಟಿಕತೆ ವೃದ್ಧಿಗೆ ಮೊಟ್ಟೆ ಸಹಕಾರಿ

### ಶಾಸಕ ಗವಿಯಪ್ಪ ಹೇಳಿಕೆ | ವಾರದ ಆರು ದಿನ ಮಕ್ಕಳಿಗೆ ಮೊಟ್ಟೆ ವಿತರಣೆಗೆ ಚಾಲನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನಗಳವರೆಗೆ ಮೊಟ್ಟೆ ವಿತರಣೆ ಕಾರ್ಯಕ್ರಮವು ಅತ್ಯಂತ ಮಹತ್ವದ್ದಾಗಿದೆ. ಇದರಿಂದ ಮಕ್ಕಳ ಪೌಷ್ಟಿಕತೆ ವೃದ್ಧಿಗೆ ತುಂಬಾ ಸಹಕಾರಿಯಾಗಲಿದೆ ಎಂದು ಶಾಸಕ ಎಚ್.ಆರ್.ಗವಿಯಪ್ಪ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ, ರಾಜ್ಯ ಸರ್ಕಾರದ ಅಕ್ಷರ ದಾಸೋಹ ಮಧ್ಯಾಹ್ನ ಬಿಸಿಯೂಟ ಯೋಜನೆಯ ಹಾಗೂ ಅಜಿಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಹಯೋಗದಲ್ಲಿ ನಗರದ 15ನೇ ವಾರ್ಡಿನ ಪುಣ್ಯಮೂರ್ತಿ ರಾಘಪ್ಪ ಶೆಟ್ಟಿ ಸರ್ಕಾರಿ ಶಾಲೆಯಲ್ಲಿ ಬುಧವಾರ ಮೊಟ್ಟೆ ವಿತರಣೆಗೆ ಚಾಲನೆ ನೀಡಿ ಮಾತನಾಡಿದರು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಬೇಕು ಎಂದು ಸೂಚಿಸಿದರು. ಅಜಿಮ್ ಪ್ರೇಮ್ ಜಿ ಫೌಂಡೇಶನ್ ಶಾಲಾ ಮಕ್ಕಳ ಆರೋಗ್ಯ ಮತ್ತು ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಮೂರು ವರ್ಷಗಳಿಗೆ 1591 ಕೋಟಿ ರೂಪಾಯಿಗಳ ನೀಡಿರುವುದು ಶ್ಲಾಘನೀಯ ಎಂದರು.

ಮಧ್ಯಾಹ್ನ ಬಿಸಿಯೂಟ ಯೋಜನೆಯ ಜಿಲ್ಲಾ ಶಿಕ್ಷಣಾಧಿಕಾರಿ ಶೇಖರ್ ಹೊರಪೇಟಿ, ತಾಲೂಕು ಸಹಾಯಕ ನಿರ್ದೇಶಕ ಸುಧಾಕರ್, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ರೇಖಾ, ಮುಖ್ಯ ಗುರು ವರಪ್ರಸಾದ್ ಸೇರಿದಂತೆ ಮತ್ತಿತರರಿದ್ದರು.

## ಜಿಲ್ಲಾ ಮಟ್ಟದ ದಸಾರ ಕ್ರೀಡಾಕೂಟ ಸೆ.28ಕ್ಕೆ

### ಹೊಸಪೇಟೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜನೆ | ಜಿಲ್ಲಾದಿಂದ ವಿಭಾಗಕ್ಕೆ ಆಯ್ಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಸಂಯುಕ್ತಾಶಯದಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಸೆಪ್ಟೆಂಬರ್ 28ರಂದು ಹೊಸಪೇಟೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಲಾಗಿದೆ.

**ಕ್ರೀಡೆಗಳು:** ಅಥ್ಲೆಟಿಕ್ಸ್, ವಾಲಿಬಾಲ್, ಫುಟ್ಬಾಲ್, ಖೋ–ಖೋ, ಕಬಡ್ಡಿ, ಥ್ರೋಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್‌ಬಾಲ್, ಟೇಬಲ್‌ಟನ್ನೀಸ್, ಬಾಲ್‌ಬ್ಯಾಡ್ಮಿಂಟನ್ ಟನ್ನಿಸ್, ನೆಟ್‌ಬಾಲ್ ಮತ್ತು ಈಜು ಮತ್ತು ಯೋಗವನ್ನು ಆಯೋಜಿಲಾಗಿದ್ದು, ಪಾದ ಹಸ್ತಹಾಸನ, ಆಕರ್ಣ ದನುರಾಸನ, ಊರ್ಧ್ವ ಧನುರಾಸನ, ಅರ್ಥಮತ್ಸೇಂದ್ರಿಯ ಹಾಸನವನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಟನ್ನಿಸ್, ನೆಟ್‌ಬಾಲ್ ಮತ್ತು ಈಜು ಕ್ರೀಡೆಗಳನ್ನು ಜಿಲ್ಲಾ ಮಟ್ಟದಿಂದ ವಿಭಾಗಿಯ ಮಟಕ್ಕೆ ಆಯ್ಕೆ ಮಾಡಲಾಗುದು.

**ವ್ಯವಸ್ಥೆ:** ಹಾಜರಾದ ಕ್ರೀಡಾಪಟುಗಳಿಗೆ ಊಟೋಪಹಾರದ ವ್ಯವಸ್ಥೆ ಮಾಡಲಾಗುವುದು ಮತ್ತು ಪ್ರಯಾಣ ಬತ್ಯೆಯನ್ನು ಕೆ2 ಮೂಲಕ ಕ್ರೀಡಾಪಟುಗಳ ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು. ಆದ್ದರಿಂದ, >>3




ಹಂಪಿ ಟೈಮ್ಸ್ HAMPI TIMES

# ಬದುಕೇ ಲವ್ ಯೂ ಥ್ಯಾಂಕ್ ಯೂ

■ ರೇಷ್ಮಾ ಕುಂದಾಪುರ

ನಾವು ಎಲ್ಲಾರೂ ಬದುಕಲ್ಲಿ ಬೇರೆಯವರಿಗೆ ಲವ್ ಯೂ ಅಂತಾ ಹೇಳಿನೇ ಹೇಳಿ ಇರತ್ತೀವೀ ಅಲ್ವಾ .ಹೇಳೋದಕ್ಕಿಂತನೂ ಒಂದು ಹೆಜ್ಜೆ ಮುಂದೆಹೋಗಿ ಅವರಿಗೋಸ್ಕರ ಏನೆಲ್ಲ ಮಾಡತ್ತಾನೇ ಇರತ್ತೀವೀ. ನಾವು ಪ್ರೀತಿಸುವವರಿಗೋಸ್ಕರ ಎಲ್ಲಾ ಮಾಡೋದು ಒಳ್ಳೆದೇ ನಮಗೂ ಒಂದು ಬದುಕಿದೇ ನಮಗೂ ಒಂದು ದೇಹವಿದೆ ನಮಗೂ ಒಂದು ಮನಸ್ಸು ಇದೆ ಅದರ ಬಗ್ಗೆ ಯೋಚಿಸಿತ್ತೀವಾ.ನಮ್ಮ ದೇಹ ಮನಸ್ಸು ಅದೆಷ್ಟೋ ಕೆಲಸ ಮಾಡುತ್ತದೆ ಆದರೆ ಒಂದು ದಿನವೂ ನಾವು ಕೃತಜ್ಞತೆ ಹೇಳೋದು ಇಲ್ಲ ಲವ್ ಯೂ ಹೇಳೋದು ಇಲ್ಲ

ಅಬ್ಬಾ ಅದೆಷ್ಟೋ ಒತ್ತಡದ ಬದುಕು ನಮ್ಮದು ನಮಗೆ ಯಾವುದಕ್ಕೂ ಸಮಯ ಇರೋದೇ ಇಲ್ಲ .ನಾವು ಸೋಷಲ್ ಮೀಡಿಯಾ ಬೇಡದರಲ್ಲಿ ಅದೆಷ್ಟೋ ಬೇಕಾದರೂ ಸಮಯ ಕಳೆಯುತ್ತೇವೆ ಅಲ್ವಾ ಆದರೆ ಈ ದೇಹ ಮನಸ್ಸು ಬದುಕು ದೇವರು ಕೊಟ್ಟಿರುವ ವರ .ಅದನ್ನ ಚೆನ್ನಾಗಿ ಇಟ್ಟುಕೊಳ್ಳೋದು ಕೂಡಾ ಒಂದು ಕರ್ಮವೇ.ದೇಹ ಅದೆಷ್ಟು ಅಧ್ಭುತ ರಚನೆ ಅಲ್ವಾ ಹೇಗೆ ಎಲ್ಲಾ ಕೆಲಸ ನಿರ್ವಹಿಸುತ್ತದೆ ನಮ್ಮ ದೇಹದ ಕೆಲಸ ನಾವು ನೀರ್ವಹಿಸುತ್ತಿದಿದ್ದರೇ ಎಲ್ಲಾವೂ ಮರೆತೇ ಹೋಗಿ ಬೇಗ ಸಾಯತ್ತಿರಬಹುದು.ಭಯ ಆದಾಗ ಉಸಿರಾಟದ ವೇಗವೇ ಬೇರೆ ಖುಷಿ ಆದಾಗ ಉಸಿರಾಟದ ವೇಗವೇ ಬೇರೆ.ಪ್ರತಿಕ್ಷಣ ಮನಸ್ಸು ದೇಹಕ್ಕಿಂತಲೂ ಇನ್ನೂ ಅಧ್ಭುತ ಅದು ಅದೆಷ್ಟೋ ಯೋಚನೆ ಮಾಡತ್ತೆ ಅಲ್ವಾ ಮಲಗಿದ್ದಾಗಾಲೂ ಸುಪ್ತ ಮನಸ್ಸು ತನ್ನ ಕೆಲಸವನ್ನು ಮಾಡತ್ತಾನೇ ಇರತ್ತೇ.

ನಾವು ಬದುಕಿದ್ದೀವೀ ಆರೋಗ್ಯವಾಗಿ ಇದ್ದೀವೀ ಅಂದರೆ ಅದೇ ದೊಡ್ಡ ಖುಷಿ ಆದರೆ ನಾವು ಯಾವಾಗಲೂ ಬೇರೆಯವರ ಬದುಕನ್ನ ನೋಡಿ ನಮಗೆ ಅದು ಇಲ್ಲ ಅದು ಇಲ್ಲ ಜೀವನದಲ್ಲಿ ಸಾಧನೆ ಮಾಡಿದ ಮೇಲೆ ಖುಷಿಯಾಗಿ ಇರತ್ತೇನೇ ಅಂತಾ ಖುಷಿನಾ ಪೋಸ್ಟ್ ಪೋನ್ ಮಾಡತ್ತಾ ಇರತ್ತೀವೀ ಅವರ ಇಲ್ಲ ಅಂದರೆ ನನ್ನ ಬದುಕು ಹೇಗೆ ಇವರು ಇಲ್ಲ ಅಂದರೆ ನನ್ನ ಬದುಕು ಹೇಗೆ ಎನ್ನುವ ಬೇಡದ ಯೋಚನೆಗಳಲ್ಲಿ ಇರತ್ತೀವೀ.ನಮಗೆ ಏನೂ ಇಷ್ಟನೂ ಅದರಲ್ಲಿ ತೊಡಗಿಸಿಕೊಂಡ ಖುಷಿಪಡಬೇಕು .ಪ್ರಕೃತಿಯ ಮಡಿಲಲ್ಲಿ ಕಳೆದುಹೋಗುವುದರಲ್ಲಿ ಅದೆಷ್ಟೋ ಖುಷಿ ಸಿಗತ್ತೇ ಉತ್ತಮ ಹವ್ಯಾಸಗಳು ನಮ್ಮ ಬದುಕನ್ನ ಸುಂದರವಾಗಿಸುತ್ತದೆ.ಪುಸ್ತಕ ಓದುವುದು ಸಾಂಗ್ ಕೇಳುವುದು ಪ್ರವಾಸಕ್ಕೆ ಹೋಗುವದು ಡ್ರಾಯಿಂಗ್ ಮಾಡೋದು ಸುಮ್ಮನೇ ಕುಳಿತು ಬೋರ್ ಅನ್ನೋದಕ್ಕಿಂತ ಇಂತಹ ಹವ್ಯಾಸಗಳನ್ನ ಅಳವಡಿಸಿಕೊಂಡು ಬೆಳೆಸಿಕೊಂಡು ಹೋದರೆ ಬದುಕು ಸುಂದರವಾಗಿ ಇರುತ್ತದೆ.

ನಮ್ಮ ಬದುಕು ನಮಗೆ ಭಗವಂತನಿಂದ ಸಿಕ್ಕ ಅತ್ಯ ಅಧ್ಭುತ ಪ್ರಸಾದ. ಅದನ್ನು ಸುಂದರವಾಗಿ ಇಟ್ಟುಕೊಳ್ಳುವುದು ನಮ್ಮ ಕರ್ತವ್ಯ .ನಮ್ಮ ಬದುಕನ್ನ ಸುಂದರವಾಗಿಸಿಕೊಳ್ಳೋದು ನಮ್ಮ ಕೈಯಲ್ಲಿಯೇ ಇದೇ ಈ ದೇಹ ಒಂದು ದಿನ ಸ್ಮಶಾನಕ್ಕೆ ಹೋಗುತ್ತದೆ .ಹೋದ ಮೇಲೆ ವಾಪಾಸ್ ಈ ದೇಹ ಈ ಬದುಕು ಸಿಗಲ್ಲಾ ಪ್ರಾಣ ಇರುವ ತನಕ ಮಾತ್ರ ಈ ದೇಹದಲ್ಲಿ ಇರಬಹುದು ಚೆನ್ನಾಗಿ ನೋಡಕೊಳ್ಳಬಹುದು ಅದಕ್ಕೆ ಯಾವಾಗಲೂ ಹೇಳೋಣ ನಮ್ಮ ಬದುಕಿಗೆ ಥ್ಯಾಂಕ್ ಯೂ ಲವ್ ಯೂ ಅಂತಾ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಕವಲುದಾರಿಯ ಕಷ್ಟ



ಪಂಪಭಾರತದಲ್ಲಿ, ಭೀಮನ ಜತೆ ಮಾತಾಡುತ್ತ ಹಿಡಿಂಬೆ ಒಂದು ಗಾದೆ ಉಲ್ಲೇಖಿಸುತ್ತಾಳೆ: "ಪಡೆ ನೋಡಲ್ ಬಂದವರ ಗುಡಿ ಹೊರೆಸಿದರ್". ಅದರ ಹಿನ್ನೆಲೆಯಿಷ್ಟು: ಯಾರೊ ಒಬ್ಬ ತರುಣ ಊರೊಳಗಿಂದ ಹಾದು ಹೋಗುತ್ತಿರುವ ದಂಡನ್ನು ನೋಡಲು ಕುತೂಹಲದಿಂದ ಬೀದಿಗೆ ಬಂದು ನಿಂತಿದ್ದನಂತೆ. ಅವನಿಗೆ ಸೈನಿಕರು ಕೈಹಿಡಿದೆಳೆದು ಸೈನ್ಯದ ಪತಾಕೆ ಹೊರೆಸಿ ಯುದ್ಧಕ್ಕೆ ಕರೆದುಕೊಂಡು ಹೋದರಂತೆ.

ಅನೇಕ ಸಲ ನಮ್ಮ ಬದುಕಿನಲ್ಲಿ ಹೀಗೇ ಆಗುತ್ತದೆ. ನಮಗೇ ಅರಿಯದೆ ನಮ್ಮ ಮೇಲೆ ಯಾರೊ ತಮ್ಮ ಕೆಲಸ ಹೊರೆಸಿಬಿಡುತ್ತಾರೆ. ನಾವೇ ಏನನ್ನೊ ಮಾಡಲು ಹೋಗಿ, ಮೂಲ ಉದ್ದೇಶದ ಮರೆತು, ಮತ್ತೊಂದು ಕೆಲಸದಲ್ಲಿ ತೊಡಗಿಬಿಡುತ್ತೇವೆ. ಕಳೆ ಕೀಳಲೆಂದು ಹೋದವರು ಬೆರಕೆಸೊಪ್ಪು ಮಡಿಲಲ್ಲಿ ತುಂಬಿಕೊಂಡೊ, ಕುರಿ ಮೇಯಿಸ ಹೋದವರು ಸೌದೆಹೊರೆ ಹೊತ್ತುಕೊಂಡೊ ಬಂದಂತೆ ಇದು. ನನ್ನ ಸಂಶೋಧನ ತಿರುಗಾಟಗಳಲ್ಲಿ ಗುಡಿ ಹೊರುವ ಕೆಲಸ ಆಗಿದ್ದೇ ಹೆಚ್ಚು. ಸೂಫಿ ನಾಥ ಶಾಕ್ತ ಆರೂಢ ಧಮ್ಮಪಂಥಗಳ ಮೊಹರಂ ಮತ್ತು ಅಮೀರಬಾಯಿ ಕರ್ನಾಟಕಿಯ ಅಧ್ಯಯನಕ್ಕೆಂದು ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲ, ಮುಖ್ಯ ವಿಷಯಕ್ಕೆ ಸಂಬಂಧಪಡದ ಯಾವುದೊ ಶಿಲ್ಪ, ವಾಸ್ತುಶಿಲ್ಪ ಶಾಸನ, ಸಮಾಧಿ, ಆಚರಣೆ, ಚಿತ್ರಪಟ, ಹೊಳೆ, ಕಾಡು ಸೆಳೆದು, ಕವಲು ಹಾದಿಗೆ ಕರೆದೊಯ್ಯುತ್ತಿತ್ತು. ಮುಖ್ಯ ಹಾದಿಯ ಕೆಲಸ ಅರಗಚ್ಚಾಗಿ ಹಿಂದೆ ಬೀಳುತ್ತಿತ್ತು.

'ನಡೆದಷ್ಟೂ ನಾಡು' ಕೃತಿಯ ಲೇಖನಗಳು, ಹೀಗೆ ಮುಖ್ಯಕಥೆಯ ಭಾಗವಾಗಿ ಹುಟ್ಟಿದ ಉಪಕತೆಗಳು. ಬೆಲ್ಲ ತಯಾರಿಕೆಯಲ್ಲಿ ಉಳಿದು ಬಿಡುವ ಕಾಕಂಬಿ, ಭಟ್ಟಿಸರಾಯಿಗೆ ಕಾರಣವಾಗುವಂತೆ, ನನ್ನ ಸಂಶೋಧನೆಯ ಬೈಪ್ರಾಡಕ್ಟುಗಳು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು
Scan For Digital Colourful
HAMPI TIMES E-paper

ವಿಶ್ವ ಫೋಟೊಗ್ರಫಿ ದಿನದ ಭಾಗವಾಗಿ ಮೊನ್ನೆ ನಾನು ಕೆಲವು ವ್ಯಕ್ತಿಕೇಂದ್ರಿತ ಪಟಗಳನ್ನು ಹಂಚಿಕೊಂಡಿದ್ದೆ. ಅದನ್ನು ಬಹಳ ಜನಮೆಚ್ಚಿದ್ದೀರಿ. ಥ್ಯಾಂಕ್ಸ್. ಆದರೆ ಈ ಪಟಗಳಿಗೆ ಯಾರೊ ಒಬ್ಬರು, ಇಲ್ಲಿ ಹೆಚ್ಚಾಗಿ ಮುದುಕರ ಪಟಗಳೇ ಇವೆಯಲ್ಲ ಯಾಕೆ ಎಂದು ಕೇಳಿರುವರು. ಹೌದಲ್ಲ ಅನಿಸಿತು. ಬಹುಶಃ ವೃದ್ಧರಲ್ಲಿ ನನ್ನ ವಿಷಯಕ್ಕೆ ಬೇಕಾದ ಮಾಹಿತಿ ಇರುತ್ತದೆಯೆಂದು ಅವರನ್ನೇ ಹೆಚ್ಚು ಭೇಟಿ ಮಾಡಿರಬಹುದು. ವಯಸ್ಸಿನ ಒಂದು ಹಂತ ದಾಟಿದ ಬಳಿಕ ವೃದ್ಧರಲ್ಲಿ ಬರುವ ಮಗುತನ ನನ್ನನ್ನು ಆಕರ್ಷಿಸಿರಬಹುದು. ಬದುಕನೆಲ್ಲ ಮುಗಿಸಿ ಮರಣದ ಹೊಸ್ತಿಲಲ್ಲಿ ಇರುವ ಅವರಲ್ಲಿ ಕಾಣುವ ಸಮಾಧಾನ ಪಕ್ವತೆ ಆದರ ಹುಟ್ಟಿಸಿರಬಹುದು. ಈ ಅವಸ್ಥೆಯನ್ನು ನಾನೂ ಒಮ್ಮೆ ಮುಟ್ಟಬೇಕಲ್ಲ ಎಂಬ ನನ್ನ ಅಂತಃಪ್ರಜ್ಞೆಯಲ್ಲಿರುವ ಬೇಗುದಿ ಇರಬಹುದು. ಸ್ಪಷ್ಟ ತಿಳಿಯದು. ಆದರೆ ಈ ವೃದ್ಧರಲ್ಲಿ ನಿರ್ಗತಿಕರಿದ್ದಾರೆ. ಮನೆಯವರಿಂದ ಹೊರಹಾಕಲ್ಪಟ್ಟ ಅನಾಥರಿದ್ದಾರೆ. ತಮ್ಮ ಕೈಲಾಗದಿದ್ದರೂ ದುಡಿದು ತಿನ್ನಬೇಕೆಂಬ ಛಲವುಳ್ಳವರುಂಟು. ಮಕ್ಕಳನ್ನು ಕಳೆದುಕೊಂಡು ಈ ಬದುಕಿನಲ್ಲೇನು ಅರ್ಥವಿದೆ ಎಂದು ವಿರಕ್ತರಾದವರಿದ್ದಾರೆ. ಇಲ್ಲಿನ ಒಂದು ಪಟಕ್ಕೆ ವಿವರಣೆ ಕೊಡಬಹುದು.

ನಾಥಪಂಥದ ಅಧ್ಯಯನಕ್ಕಾಗಿ ಅರಕಲಗೂಡಿನ ಕಾಳೇನಹಳ್ಳಿಗೆ ಹೋಗಿದ್ದೆ. ಅಲ್ಲಿರುವ ಜೋಗಿ ಸಮುದಾಯದ ಮನೆಗಳಿಗೆ ಭೇಟಿಕೊಟ್ಟು, ಅವರ ನಿತ್ಯ ಬದುಕಿನಲ್ಲಿ ನಾಥಪಂಥವು ಹೇಗೆ ರೂಪಾಂತರದಲ್ಲಿದೆ ಎಂದು ನೋಡುವುದು ನನ್ನ ಉದ್ದೇಶ. ಹಾಗೆ ತಿರುಗಾಡುವಾಗ ಬೀದಿಯಲ್ಲಿ ಈವೊಂದು ಮುದುಕಿ ಕೂತಿತ್ತು. ಎಲೆಯಡಕೆ ಹಾಕಿ ಬಾಯಿ ಕೆಂಪಾಗಿತ್ತು. ಹಲ್ಲು ಕಪ್ಪುಹಿಡಿದಿದ್ದವು. ತಲೆಯೆಂದು ಬಾಚಿದ್ದೊ ತಿಳಿಯದು. ರವಿಕೆ ಹರಿದಿತ್ತು. ಕುತ್ತಿಗೆಯ ಬಳಿ ಕಜ್ಜಿಯಿಂದ ಕೆರೆದು ಚರ್ಮ ದಡ್ಡುಗಟ್ಟಿ ಕಪ್ಪಗಾಗಿತ್ತು. ನನಗೆ ಕುತೂಹಲ ಹುಟ್ಟಿದ್ದು ಅಜ್ಜಿಯ ಕಿವಿಯಲ್ಲಿರುವ ಸುರುಳಿ. ಕಿವಿಯ ಆಭರಣವನ್ನು ಅದು ಚಿನ್ನದ್ದಾಗಿದ್ದರೂ ಬೆಂಡೋಲೆ ಎಂದು ಕರೆಯುವರು. ಹಿಂದಿನವರು ಓಲೆಗರಿಯಿಂದ ಮಾಡಿದ ಸುರುಳಿ ಇರಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಕಿವಿತೂತವು ಮುಚ್ಚಬಾರದೆಂದು ಬೆಂಡನ್ನು ಇರಿಸಿಕೊಳ್ಳುತ್ತಿದ್ದರು. ಹೀಗಾಗಿ ಕಿವಿಯ ಒಡವೆಗೆ ಬೆಂಡೋಲೆ ಎಂದು ಹೆಸರು ಬಂದಿತು. ಗೌರಿಪೂಜೆಗೆ ಒಯ್ಯುವ ಬಿಚ್ಚೋಲೆಯಲ್ಲಿ ಓಲೆಗರಿಯು ಈಗಲೂ ಬಳಕೆಯಾಗುತ್ತದೆ. ಓಲೆಯು ಗರತಿಯಾದವಳ ಪ್ರತೀಕ. ಪ್ರಾಣಿ ಪಕ್ಷಿ ಸಸ್ಯಗಳ ಅವಶೇಷಗಳು ಮಾನವರ ತೊಡುಗೆಗಳಾಗುವುದು ಮೂಲನಿವಾಸಿ ಬುಡಕಟ್ಟುಗಳ ಸಂಪ್ರದಾಯದ ಪ್ರಳೆಯುಳಿಕೆ. ಈಗ ತಾಡೋಲೆಯ ಮರಗಳೂ ಇಲ್ಲ. ಹೀಗಾಗಿ ಅಜ್ಜಿಯ ಕಿವಿಯಲ್ಲಿದ್ದುದು ಓಲೆಗರಿಯಲ್ಲ. ಪ್ಲಾಸ್ಟಿಕ್ಕಿನ ಗರಿ. ಅಜ್ಜಿಗೆ ಕಾಲಿರಲಿಲ್ಲ. ಹೀಗಾಗಿ ಬೀದಿಯಲ್ಲಿ ಕೂತಿತ್ತು. ಯಾಕೊ ಸಿದ್ಧಲಿಂಗಯ್ಯನವರ 'ಅಲ್ಲೇ ಕುಂತವರೇ' ಪದ್ಯ ನೆನಪಿಗೆ ಬಂದಿತು. ಆಕೆಯ ಹಿನ್ನೆಲೆ ವಿಚಾರಿಸಿದೆ. ಹೇಳಲಿಲ್ಲ. ದೇವರಿದ್ದಾನೆ ಕಾಪಾಡ್ತಾನೆ ಎಂದಳು. ಅವಳ ಅವಸ್ಥೆಗೆ ಮನ ಮಿಡುಕಿತು. ಬಂದದ್ದು ಬರಲಿ ಜಯಿಸುವೆ ಎಂಬ ಮುಖಭಾವದಲ್ಲಿದ್ದ ತುಂಟತನ, ಪ್ರಸನ್ನತೆ ಮತ್ತು ಖುಶಿ ಬೆರಗು ಹುಟ್ಟಿಸಿತು.

ಹೇಳ್ತಾ ಹೋದರೆ ಪ್ರತಿ ಪಟಕ್ಕೂ ಒಂದು ಕತೆ ನಿರೂಪಿಸಬಹುದು. ನಾಡಿನ ಪ್ರಾಚೀನ ಸಂಸ್ಕೃತಿ ಇತಿಹಾಸ ಪರಂಪರೆ ಹುಡುಕಿಕೊಂಡು ಯುದ್ಧಕ್ಕೆಂದು ಹೋದರೆ, ನಡುವೆ ಸಿಗುವ ಇಂತಹ ಜನ, ಕಂಡ ಘಟನೆ, ಕೇಳಿದ ಕಥೆ, ಹೆಗಲಿಗೆ ವರ್ತಮಾನದ ವಾಸ್ತವದ ಪತಾಕೆಯನ್ನು ಹೊರೆಸಿ, ಬೇರೊಂದು ಯುದ್ಧಭೂಮಿಗೆ ಕಳಿಸಿಬಿಡುವುದುಂಟು, ಇಷ್ಟಕ್ಕೂ ಕೆಲವು ಪಯಣಗಳಲ್ಲಿ ಮನೆಯಿಂದ ಹೊರಡುವಾಗ ನಿಶ್ಚಯಿಸಿದ ಗುರಿಯನ್ನೇ ತಲುಪುವ ಜರೂರಿಯಿಲ್ಲ. ಕವಲುದಾರಿಗಳು ಕೊಡುವ ಖುಶಿಯೇ ಬೇರೆ.

# ವರ್ಡ್ಸ ದಟ್ ಹರ್ಟ್ ವರ್ಡ್ಸ ದಟ್ ಹೀಲ್...

### ಎಂಬ ಮಾತಿನ ಕುರಿತ ಕೃತಿ

ಜೋಸೆಫ್ ತೆಲುಷ್ಕಿನ್ ಬರೆದಿರುವ "ವರ್ಡ್ಸ ದಟ್ ಹರ್ಟ್ ವರ್ಡ್ಸ ದಟ್ ಹೀಲ್" ಎಂಬ ಕೃತಿಯು ಮನುಷ್ಯನ ಮಾತನಾಡುವ ನೈತಿಕ ಪರಿಭಾಷೆಯ ಕುರಿತಾದ ಕೃತಿಯಾಗಿದೆ.

ಓರ್ವ ಖ್ಯಾತ ಅರಬ್ಬಿ ಲೇಖಕನಾಗಿರುವ ತೆಲುಷ್ಕಿನ್ ಯಾವ ರೀತಿ ಮಾತುಗಳು ನಮ್ಮ ಸುತ್ತಲಿನ ಜಗತ್ತನ್ನು

ರೂಪಿಸಿ ನಮ್ಮ ವ್ಯಕ್ತಿತ್ವವನ್ನು ಬೆಳೆಸುತ್ತವೆ ಮತ್ತು ಯಾವ ರೀತಿ ಬೇರೆಯವರನ್ನು ನೋವಿನ ಕೂಪದಿಂದ ಮೇಲೆತ್ತಲು ಸಹಾಯ ಮಾಡುತ್ತವೆ, ಶಮನಕಾರಿ ಇಲ್ಲವೇ ವಿನಾಶಕಾರಿಯಾಗಿರುತ್ತವೆ ಎಂಬುದನ್ನು ತನ್ನ ಈ ಕೃತಿಯಲ್ಲಿ ವಿಷದವಾಗಿ ವಿವರಿಸಿದ್ದಾನೆ.


ಯಹೂದಿ ಜನಾಂಗದ ಕಲಿಕೆ ಮತ್ತು ಪ್ರಾಯೋಗಿಕ ಜಾಣ್ಮೆಯನ್ನು ಹೊಂದಿರುವ ಈ ಕೃತಿಯಲ್ಲಿ ಕೃತಿಕಾರರು ನಮ್ಮ ಮಾತುಗಳನ್ನು ಒಳ್ಳೆಯ ಚಾಲಕ ಶಕ್ತಿಯಾಗಿ ಹೇಗೆ ಸಂವಹನದಲ್ಲಿ ಮುಂದುವರಿಸಬಹುದು ಎಂಬುದರ ಕುರಿತು ದಾರಿ ತೋರಿದ್ದಾರೆ.

ಪದಗಳಲ್ಲಿರುವ ಶಕ್ತಿ... ಪದಗಳಲ್ಲಿರುವ ಅಸಾಧಾರಣ ಶಕ್ತಿಯನ್ನು ಕುರಿತು ಹೇಳುತ್ತಾ ತೆಲುಶ್ಕಿನ್ ಭಾಷೆ ಎನ್ನುವುದು ಸಂವಹನ ಮಾಧ್ಯಮ ಮಾತ್ರವಲ್ಲ ಬೇರೆಯವರ ಹೃದಯದ ಅಂತರಾಳವನ್ನು ತಟ್ಟುವ, ನೋಯಿಸುವ ಮಾಧ್ಯಮವು ಹೌದು. ಪದಗಳು ಇಬ್ಬರು ವ್ಯಕ್ತಿಗಳ ನಡುವೆ ಪ್ರೀತಿಯ, ವಿಶ್ವಾಸದ ಮತ್ತು ನಂಬಿಕೆಯ ಸೇತುವೆಯನ್ನು ಕಟ್ಟುತ್ತವೆ. ವಿಪರ್ಯಾಸವೆಂದರೆ ಪದಗಳು ಎಂದೂ ವಾಸಿಯಾಗದ ಭಾವನಾತ್ಮಕ ಗಾಯಗಳನ್ನು, ತಪ್ಪು ಕಲ್ಪನೆಗಳನ್ನು, ಮಾನಸಿಕ ಹಿಂಸೆಯನ್ನು ಕೂಡ ನೀಡುತ್ತವೆ. ಆದ್ದರಿಂದ ಮಾತನಾಡುವಾಗ ನಾವು ಉದ್ದೇಶಪೂರ್ವಕವಾಗಿ ಜಾಗರೂಕರಾಗಿರಬೇಕು ಎಂದು ಎಚ್ಚರಿಸಿದ್ದಾನೆ.

2. ಋಣಾತ್ಮಕ ಮಾತುಗಳನ್ನು ಆಡಬಾರದು... ಲಾಶೋಹರ ಎಂಬ ಹೀಬ್ರು ಪದವನ್ನು ಬಳಸುವ ಆತ ಯಹೂದಿ ನೈತಿಕತೆಯ ಪ್ರಕಾರ 'ಅದು ನಿಜವೇ ಇದ್ದರೂ ಕೂಡ ಬೇರೆಯವರ ಬಗ್ಗೆ ನಕಾರಾತ್ಮಕ ಮಾತುಗಳನ್ನಾಡುವುದು ದುಷ್ಟ ರಾಕ್ಷಸಿ ಪ್ರವೃತ್ತಿ ಎಂದು ವಿವರಿಸುತ್ತಾನೆ. ಅವಶ್ಯಕ ಮತ್ತುಪ್ರಾಮಾಣಿಕವಾಗಿದ್ದರೂ ಕೂಡ ಇಂತಹ ಮಾತುಗಳು ಹಾನಿಕರವಾಗಿದ್ದು ಮಾತನಾಡುವವರ ಚಾರಿತ್ರ್ಯ ಮತ್ತು ನೈತಿಕತೆಯನ್ನು ಪ್ರಶ್ನಿಸುತ್ತವೆ, ಅಲ್ಲದೆ ನಕಾರಾತ್ಮಕ ಮಾತುಗಳು ಸಂಬಂಧಗಳಲ್ಲಿನ ಸಾಮರಸ್ಯವನ್ನು ಹಾಳುಗೆಡವುವುದಲ್ಲದೇ ತಿರಸ್ಕಾರವನ್ನು ಬಿತ್ತುವ ಮೂಲಕ ದ್ವೇಷಮಯ ವಾತಾವರಣವನ್ನು ಸೃಷ್ಟಿಸುತ್ತವೆ. ಪುಸ್ತಕವು ಒಳ್ಳೆಯ ಮಾತುಗಳನ್ನು ಆಡಲು ಪ್ರೋತ್ಸಾಹಿಸುತ್ತ ನಮ್ಮ ಬಾಯಿಂದ ಹೊರಡುವ ಮಾತುಗಳು ಉಂಟು ಮಾಡುವ ಪರಿಣಾಮಗಳ ಕುರಿತು ಎಚ್ಚರ ವಹಿಸುವಂತೆ ಸೂಚಿಸುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper



3. ಹೊಗಳಿಕೆಯ ಮಹತ್ವ..... ಲಾಶೋಹರ ( ನಕಾರಾತ್ಮಕ ಪದ ಬಳಕೆ) ಗೆ ವಿರುದ್ಧವಾಗಿ ಹೊಗಳಿಕೆ ಮತ್ತು ಧನಾತ್ಮಕ ಪರಿಣಾಮಗಳ ಕುರಿತು ಹೇಳುತ್ತಾ ಒಳ್ಳೆಯ ಅಭಿನಂದನೆ ಮತ್ತು ಪ್ರೋತ್ಸಾಹದಾಯಕ ಮಾತುಗಳು ವ್ಯಕ್ತಿಯ ಮಾನಸಿಕ ಬಲವನ್ನು ಎತ್ತಿ ಹಿಡಿಯುವುದಲ್ಲದೆ ಇಬ್ಬರ ನಡುವಿನ ಸಂಬಂಧವನ್ನು ವರ್ಧಿಸುತ್ತವೆ ಮತ್ತು ಧನಾತ್ಮಕ ವಾತಾವರಣವನ್ನು ಸೃಷ್ಟಿಸುತ್ತವೆ. ಆದ್ದರಿಂದ ಒಬ್ಬರ ಒಳ್ಳೆಯ ಕೆಲಸವನ್ನು ಹೋಗಲು ನಾವು ಸದಾ ಸನ್ನದ್ಧರಾಗಿದ್ದು ಅವಕಾಶಗಳಿಗಾಗಿ ಕಾಯುತ್ತಿದ್ದು ಅವರ ಸಾಮರ್ಥ್ಯ ಮತ್ತು ಸಾಮಾಜಿಕ ಕಾಣಿಕೆಗಳನ್ನು ಮುಕ್ತವಾಗಿ ಪ್ರಶಂಸಿಸುವ ಮೂಲಕ ನಾವು ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುವ, ಪರಸ್ಪರ ಗೌರವವನ್ನು ನೀಡುವ,ಸಂಬಂಧಗಳನ್ನು ಉತ್ತಮವಾಗಿ ವೃದ್ಧಿಸಬಹುದು.

4 ಮಾತುಗಳ ಏರಿಳಿತದ ಪರಿಣಾಮಗಳು... ಮಾತುಗಳು ಬಹು ದೂರದವರೆಗೆ ಪರಿಣಾಮವನ್ನು ಬೀರುವ ಕುರಿತು ಹೇಳುವ ತೆಲುಷ್ಕಿನ್...ಸಿಟ್ಟಿನಿಂದ ಅತ್ಯಂತ ಕಟುವಾಗಿ ಮಾತನಾಡಿದ ವ್ಯಕ್ತಿಯ ಮಾತುಗಳು ಕೇವಲ ಕೇಳಿದವರ ಮಾನಸಿಕ ಸ್ಥಿತಿಯನ್ನು ಹದಗೆಡಿಸುವುದಲ್ಲದೆ ಬೇರೆಯವರ ಪರಸ್ಪರ ಮಾತುಕತೆಯಲ್ಲಿಯೂ ಕೂಡ ಪ್ರತಿಧ್ವನಿಸುತ್ತದೆ. ಪ್ರೀತಿಯ ಮತ್ತು ಸಮಾಧಾನದ ಮಾತುಗಳು ಜೀವಕ್ಕೆ ತಂಪನ್ನೆರೆಯುತ್ತವೆ. ನಮ್ಮ ಮಾತುಗಳು ನಮಗೆ ಅಗೋಚರವಾದ ಅತಿ ದೊಡ್ಡ ಸಮುದಾಯವನ್ನು ಪ್ರಭಾವಗೊಳಿಸುವ ಮತ್ತು ಸಾಮಾಜಿಕ ಕ್ರಿಯಾಶಕ್ತಿಯ ಮೇಲೆ ಪರಿಣಾಮವನ್ನು ಬೀರುವ ಶಕ್ತಿಯನ್ನು ಹೊಂದಿದ್ದು ವ್ಯಕ್ತಿಯು ತನ್ನ ಮಾತುಗಳು ಬಹು ದೂರದವರೆಗೆ ಬೀರುವ ಪರಿಣಾಮದ ಕುರಿತು ಅತಿ ಹೆಚ್ಚು ಎಚ್ಚರವನ್ನು ವಹಿಸಬೇಕು.

5... ಅವಾಚ್ಯ ಪದಗಳಿಗೆ ಮೌನವೇ ಉತ್ತರ.... ಪುಸ್ತಕದ ಅತಿ ಮುಖ್ಯ ಮತ್ತು ಶಕ್ತಿದಾಯಕ ಪಾಠವೆಂದರೆ ಮೌನದ ಶಕ್ತಿ. ಅವಾಚ್ಯ ಮತ್ತು ಅನವಶ್ಯಕ ಮಾತುಗಳಿಗೆ ಉತ್ತರ ಮೌನವಾಗಿರಲಿ.

ಬೇರೆಯವರ ಮಾತುಗಳು ಗೊಂದಲ ಮೂಡಿಸಿದಾಗಲೂ ಕೂಡ ಅನವಶ್ಯಕವಾಗಿ ಪ್ರತಿಕ್ರಿಯಿಸದೆ ಮೌನವಾಗಿರುವುದು ಒಳ್ಳೆಯದು.

ಮೌನವಾಗಿರುವುದನ್ನು ಅಭ್ಯಸಿಸಲು ಸ್ವಯಂಶಿಸ್ತು

ಮತ್ತು ಧ್ಯಾನಸ್ಥ ಮನಸ್ಥಿತಿ ಅತ್ಯವಶ್ಯಕವಾಗಿದ್ದು ಮೌನದ ಮೂಲಕ ಮುಜುಗರಕ್ಕೊಳಗಾಗುವ ಮತ್ತು ಪಶ್ಚಾತಾಪ ಪಡುವ ಸನ್ನಿವೇಶಗಳನ್ನು ತಪ್ಪಿಸಬಹುದು.

6. ಶಮನಕಾರಿ ಮಾತುಗಳು..... ಕೆಲ ಮಾತುಗಳು ಮನಸ್ಸಿಗೆ ತಂಪನ್ನೆರೆಯುತ್ತವೆ. ಕ್ಷಮೆ ಕೇಳುವ, ಕ್ಷಮಾದಾನ ನೀಡುವ, ದಯೆಯನ್ನು ತೋರುವ ಮಾತುಗಳು ಭಾವನಾತ್ಮಕ ಗಾಯಗಳನ್ನು ವಾಸಿ ಮಾಡಬಲ್ಲವು. ಈ ಪುಸ್ತಕದಲ್ಲಿ ಕರ್ತೃವು ತಪ್ಪು ಮಾಡಿದಾಗ ಪ್ರಾಮಾಣಿಕವಾಗಿ ಕ್ಷಮೆ ಕೇಳುವ ಮಹತ್ವದ ಕುರಿತು ಹೇಳುತ್ತಾ ಮತ್ತು ಕ್ಷಮೆ ಕೇಳುವ ಮತ್ತು ನೀಡುವ ಮೂಲಕ ಈ ಹಿಂದಿನ ಗಾಯಗಳನ್ನು ನೋವುಗಳನ್ನು ಮರೆತು ಮುಂದೆ ಸಾಗಬಹುದು ಎಂಬುದನ್ನು ಹೇಳುತ್ತಾನೆ.

7. ದೈನಂದಿನ ಜೀವನದಲ್ಲಿ ಒಳ್ಳೆಯ ಮಾತುಗಳನ್ನಾಡುವುದನ್ನು ರೂಢಿಸಿಕೊಳ್ಳಬೇಕು..... ಒಳ್ಳೆಯ ಮಾತುಗಳನ್ನು ಆಡಲು ಸಮಯ,ಸಂದರ್ಭ ಗಳಿಗಾಗಿ ಕಾಯದೆ ಯಾವಾಗಲೂ ಒಳ್ಳೆಯ ಮಾತುಗಳನ್ನಾಡುವುದನ್ನು ರೂಢಿಸಿಕೊಳ್ಳಬೇಕು. ಮಾತನಾಡುವ ಮಾತುಗಳ ಕುರಿತ ಸ್ಪಷ್ಟತೆಯಿರಬೇಕು. ನಮ್ಮ ಮಾತುಗಳು ಬೇರೆಯವರ ಮೇಲೆ ಉಂಟು ಮಾಡುವ ಪರಿಣಾಮಗಳ ಕುರಿತ ಅರಿವು ನಮಗಿರಬೇಕು. ಪ್ರಾಮಾಣಿಕತೆ, ಕರುಣೆ ಮತ್ತು ಭಾವೈಕ್ಯತೆ ನಮ್ಮ ಮಾತುಗಳಲ್ಲಿ ಮಿಳಿತವಾಗಿರಬೇಕು. ನಿರಂತರವಾಗಿ ರೂಢಿಸಿಕೊಳ್ಳುವ ಒಳ್ಳೆಯ ಮಾತುಕತೆಗಳು ನಮ್ಮ ಸಂಭಾಷಣೆಯ ಗುಣಮಟ್ಟವನ್ನು ಹೆಚ್ಚಿಸಿ ಧನಾತ್ಮಕ ಮತ್ತು ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸುತ್ತವೆ.

8 ನಮ್ಮ ಮಾತುಗಳು ಉಂಟು ಮಾಡುವ ಪರಿಣಾಮಗಳಿಗೆ ನಾವೇ ಜವಾಬ್ದಾರರು.... ಎಂಬ ಅರಿವನ್ನು ಹೊಂದಿದಾಗ ನಮ್ಮ ಮಾತುಗಳಲ್ಲಿ ಸಹಾನುಭೂತಿ ಮತ್ತು ಚಿಂತನಶೀಲತೆ ಉಂಟಾಗುತ್ತದೆ. ತಮ್ಮ ಮಾತುಗಳಿಂದ ಬೇರೆಯವರಿಗೆ ನೋವು,ತೊಂದರೆ, ಮುಜುಗರಗಳಾಗದಂತೆ ಎಚ್ಚರ ವಹಿಸುವ ಜವಾಬ್ದಾರಿ ಮಾತನಾಡುವವರದಾಗಿರುತ್ತದೆ. ನಮ್ಮ ಮಾತುಗಳು ಚಿನ್ನವನ್ನು ತೂಕ ಮಾಡಿದಷ್ಟು ಮೌಲ್ಯಯುತವಾಗಿರಬೇಕು.

9 ಪ್ರಾಯೋಗಿಕ ಪ್ರಯೋಗ.... ನಮ್ಮ ಮಾತುಗಳನ್ನು ಮತ್ತು ಸಂವಹನವನ್ನು ನಿರಂತರ ಪ್ರಯತ್ನ ಮತ್ತು ರೂಢಿಸಿಕೊಳ್ಳುವಿಕೆಯ ಮೂಲಕ ಬದಲಿಸಿಕೊಳ್ಳಬಹುದು. ವಾರದಲ್ಲಿ ಒಂದು ದಿನ ಯಾವುದೇ ರೀತಿಯ ನಕಾರಾತ್ಮಕ ಮಾತುಗಳನ್ನು ಆಡುವುದಿಲ್ಲ ಎಂದು ನಮಗೆ ನಾವೇ ವ್ರತದಂತೆ ಪಾಲಿಸಬೇಕು. ಅವಕಾಶಗಳು ಸಿಕ್ಕಾಗ ಬೇರೆಯವರನ್ನು ತುಂಬು ಹೃದಯದಿಂದ ಪ್ರಶಂಸಿಸಬೇಕು. ನಮ್ಮ ಧನಾತ್ಮಕ ಮಾತುಗಳು ಒಳ್ಳೆಯ ಸಂಬಂಧಗಳನ್ನು ನಿರ್ಮಿಸುತ್ತವೆ.

10. ಸಾಂಸ್ಕೃತಿಕ ಮತ್ತು ಧಾರ್ಮಿಕ ಒಳನೋಟಗಳು. ಪುಸ್ತಕದಲ್ಲಿ ತೆಲುಸ್ಕಿನ್ ಯಹೂದಿಸಂಸ್ಕೃತಿಯ ಶ್ರೀಮಂತ ಪರಂಪರೆ ಮತ್ತು ಮೌಲ್ಯಗಳ ದೃಷ್ಟಿಕೋನದ ಪದಗಳನ್ನು ಬಳಸಿದ್ದು ಆತನ ಪುಸ್ತಕದಲ್ಲಿ ತೋರ,ತಾಲಮುಡ ಮುಂತಾದ ಯಹೂದಿ ಪದಗಳನ್ನು ಬಳಸಿದ್ದು ಒಂದೇ ಒಂದು ನಕಾರಾತ್ಮಕ ಪದವು ಬಳಕೆಯಾಗಿಲ್ಲ ಎಂಬುದು ಈ ಕೃತಿಯ ಹೆಗ್ಗಳಿಕೆಯಾಗಿದೆ.

ಇದನ್ನು ಅರಿತೇ ನಮ್ಮ ಹಿರಿಯರು 'ಮಾತೇ ಜ್ಯೋತಿರ್ಲಿಂಗ' ಎಂದು ಮಾತನ್ನು ಲಿಂಗಸ್ವರೂಪಿ ಶಿವನಿಗೆ ಹೋಲಿಸಿದ್ದಾರೆ.

"ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು" ಎಂಬ ಮಾತು ಕೂಡ ನಮ್ಮ ಜನಪದ ಗಾದೆಗಳಲ್ಲಿ ಬಳಕೆಯಲ್ಲಿದ್ದು ಮಾತು, ಮೌನ ಮತ್ತು ಅವುಗಳ ಪರಿಣಾಮದ ಕುರಿತು ಲೇಖಕರು ಚರ್ಚಿಸಿರುವ ವಿಷಯಗಳನ್ನು ಮತ್ತೆ ಮತ್ತೆ ಮನನ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳೋಣ. ಏನಂತೀರಾ ಸ್ನೇಹಿತರೆ?

## ಕವಿ ಮನಸು

### ಹೆಣ್ಣು

ಹೆಣ್ಣೆಂದರೆ ಜಗತ್ತಿನ ಶಕ್ತಿ
ಯಾರಿಗೇನು ಕಮ್ಮಿಅವಳ ಯುಕ್ತಿ
ಹೆಣ್ಣಿನ ಸಾಧನೆ ಅಗಣ್ಯ
ನೀಡಬೇಕು ಅವಳಿಗೆ ಮಾನ್ಯ

ಉಸಿರಕೊಟ್ಟು ಅಮೃತವ ಉಣಿಸಿದ ಮಾತೆ
ಪ್ರೀತಿ-ಮಮತೆಯ ಧಾರೆ ಎರೆದ ದೇವತೆ
ಕಷ್ಟ ಎನ್ನಲು ಹೆಗಲು ಕೊಟ್ಟು ನಿಂತೆ
ತಿದ್ದಿ-ತೀಡಿ ಜೀವನವ ರೂಪಿಸಿದ ದಾತೆ

ತಾಯಿ ಮಗಳು ಮಡದಿ ಸಹೋದರಿ
ರೂಪದಿ
ಸಬಲೆ ಸಮನ್ವಯಿ ಇವಳು ಎಲ್ಲಾ ರಂಗದಿ
ಧೈರ್ಯ ಶೌರ್ಯವಂತಳಿವಳು ಗಂಡಿನ
ತೆರದಿ
ಕೈಯ ಎತ್ತಿ ಮುಗಿಯಿರಿ ಧನ್ಯತಾ ಭಾವದಿ

ನೋವಿನಲ್ಲೂ ಮಂದಹಾಸವ ಬೀರುವಳು
ತನ್ನವರಿಗಾಗಿ ಜೀವವ ಸವೆಸುವಳು
ಮನೆಯವರಿಗಾಗಿ ಅನುದಿನ
ದುಡಿಯುವವಳು
ಕಷ್ಟಗಳ ನುಂಗಿ ಸುಖವನ್ನು ಹಂಚುವಳು

ತನು ಮನವ ಸಂಸಾರಕ್ಕಾಗಿ
ಮುಡಿಪಿಟ್ಟಳಾಕೆ
ಬೆಲೆಕಟ್ಟಲಾಗದ ಅಪರೂಪದ ಹೊನ್ನು
ಈಕೆ
ಇವಳಿಗೆ ಬೇರೆ ಹೋಲಿಕೆ ಏಕೆ
ಸ್ತ್ರೀ ಅಂದರೆ ಅಷ್ಟೇ ಸಾಕೆ

ವಿವಿಧ ಕ್ಷೇತ್ರಗಳಲ್ಲಿ ಹೆಣ್ಣಿನ ಕೊಡುಗೆ
ಅಪಾರ
ದುಷ್ಟ ಶಕ್ತಿಗಳಿಗೆ ಇವಳಿಂದಲೇ ಸಂಹಾರ
ಒಡಲಲ್ಲಿರುವುದು ಹೆಣ್ಣೆಂದು ತಿಳಿದು
ಹತ್ಯೆಯ ಮಾಡದಿರಿ
ಅವಳೇ ಸಂಸಾರದ ಕಣ್ಣು ಎಂದು
ಮರೆಯದಿರಿ

-ಚೇತನ ಭಾರ್ಗವ, ಬೆಂಗಳೂರು

### ತಾಯ್ತನ

ಪ್ರತಿ ಹೆಣ್ಣಿನಲ್ಲಿರುವ ಹೆಣ್ತನ
ಅನುಭವಿಸಬೇಕು ತಾಯ್ತನ..!
ಮಾಡಬೇಕಾಗ ಜೋಪಾನ
ಆಗಲೇ ಮಗುವಿನ ಆಗಮನ..!!


ಸೇವಿಸಬೇಕು ಪೌಷ್ಟಿಕ ಆಹಾರ
ಮನಸ್ಸು ಇರಬೇಕು ಆಹ್ಲಾದಕರ.!
ಒಳ್ಳೆಯ ಆಲೋಚನೆ ಸುಂದರ
ಇದು ತಾಯಿ ಕಂದಗೆ ಶುಭಕರ..!!

ಒಡಲಲ್ಲಿ ಮಗುವಿನ ಸಂಚಲನ
ಅದು ಅನುಭೂತಿಯ ಸವಿಗಾನ.!
ಮೇರು ವಾತ್ಸಲ್ಯದ ಸಿಹಿಸಿಂಚನ
ಕರುಳಬಳ್ಳಿ-ತಾಯಿಯ ಬಂಧನ..!!

ನವಮಾಸ ಹೊತ್ತು,ಮಗುವ ಹೆತ್ತು
ಪ್ರೀತಿ,ಜವಾಬ್ದಾರಿ ಹೆಗಲಿಗೆ ಹೊತ್ತು.!
ಕೊಟ್ಟು ಆದರ್ಶದ ಬಾಳಿನ ಮುತ್ತು
ತೋರಬೇಕು ತಾಯ್ತನದ ನಿಯತ್ತು..!!

– ವಿಜಯಲಕ್ಷ್ಮಿ ನಾಯ್ಕ್ ಬಿಳಿಯೂರು
ದಕ್ಷಿಣ ಕನ್ನಡ

### ಸೂರ್ಯ ದೇಗುಲ



ಗಿರಿಯ ನಡುವಲಿ ಮೂಡಿ ಬಂದನು
ಪೂರ್ವ ದಿಕ್ಕಲಿ ದಿನಕರ
ಹೊನ್ನ ಕಿರಣದ ಕರವ ಚಾಚಿದ
ರವಿಯು ಶಕ್ತಿಯ ಆಗರ

ಬುವಿಯ ಒಡಲಲಿ ಜೀವ ಮೊಳೆಯಲು
ಸೂರ್ಯ ದೇವನೆ ಕಾರಣ
ಚಿಗುರು ಒಡೆಯಲು ಹಸಿರು ಬೆಳೆಯಲು
ರವಿಯ ರಶ್ಮಿಯೆ ಪ್ರೇರಣ

ಅರ್ಕ ದೇವನ ಗುಡಿಯು ಹೊಂದಿದ
ಕೊನಾರ್ಕ್ ಆಗಿದೆ ಪಾವನ
ಸೂರ್ಯ ದೇವನ ದಿವ್ಯ ದೇಗುಲ
ಕಂಡು ಧನ್ಯವು ಈ ಮನ॥

ಪೆರ್ಮುಖ ಸುಬ್ರಹ್ಮಣ್ಯ ಭಟ್

---

**ಗೆಳೆಯರೇ ನೀವ್ಯಾರು ಕಷ್ಟಪಟ್ಟು ಓದಬೇಡಿ ಇಷ್ಟವಾಗಿ ಓದುವುದನ್ನು ಪ್ರಾರಂಭಿಸಿ. ಬಹಳಷ್ಟು ವಿದ್ಯಾರ್ಥಿಗಳಿಗೆ ಓದಬೇಕೆಂದು ಆಸೆ ಇರುತ್ತದೆ. ಆದರೆ ಹೇಗೆ ಓದಬೇಕೆನ್ನುವುದು ತಿಳಿದಿರುವುದಿಲ್ಲ. ಅಂತವರಿಗೆ ಸ್ವಲ್ಪ ಮಾರ್ಗದರ್ಶನ ಸಿಕ್ಕರೆ ಒಳ್ಳೆಯ ಯಶಸ್ಸು ಪಡೆಯುತ್ತಾರೆ. ಹಾಗೆ ಮಾರ್ಗದರ್ಶನ ನೀಡುವ ಚಿಕ್ಕ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.**

# ವಿದ್ಯಾರ್ಥಿಗಳೊಂದಿಗೆ.......



**ಪ್ರಿಯ ವಿದ್ಯಾರ್ಥಿ ಮಿತ್ರರೇ,**
ಮಳೆಗಾಲದ ಈ ದಿನಗಳಲ್ಲಿ ಎಲ್ಲರನ್ನು ಕೆಮ್ಮು ನೆಗಡಿ ಜ್ವರ ಕಾಡುತ್ತಿರುತ್ತವೆ. ಇವನ್ನು ಮೀರಿ ವಿದ್ಯಾರ್ಥಿಗಳನ್ನು ಕಾಡುವ ಜ್ವರವೆಂದರೆ ಪರೀಕ್ಷಾ ಜ್ವರ. ಇದುವರೆಗೂ ಪುಸ್ತಕಗಳ ಮೇಲೆ ಕಣ್ಣಾಡಿಸುತ್ತಾ ವೆಬ್ ಸೀರೀಸ್ ಗಳನ್ನು ನೋಡಿದ್ದಾಯಿತು ಇನ್ನಾದರೂ ಸೀರಿಯಸ್ ಆಗಿ ಓದಬೇಕು ಅಂದುಕೊಳ್ಳುವವರು ಕೆಲವರಾದರೆ ಪಠ್ಯಪುಸ್ತಕಗಳನ್ನು ಸೀರಿಯಲ್ ಗಳಂತೆ ಮೊದಲ ಪುಟದಿಂದ ಕೊನೆಯ ಪುಟದವರೆಗೂ ಒಂದೂ ಬಿಡದೆ ಓದಿದ ಮೇಲು ನನಗೇನು ಗೊತ್ತಿಲ್ಲ ಯಾವುದು ನೆನಪಿಲ್ಲ ಏನು ಮಾಡುವುದೋ ಗೊತ್ತಿಲ್ಲ ಎಂದು ತಲೆಯ ಮೇಲೆ ಕೈ ಹೊತ್ತು ಕುಳಿತವರು ಕೆಲವರು. ಎಲ್ಲರನ್ನೂ ಈ ಪರೀಕ್ಷಾ ಜ್ವರ ಕಾಡಿಸದೆ ಬಿಡದು.

ಬೇರೆ ರೀತಿಯ ಜ್ವರಗಳನ್ನು ವೈದ್ಯರು ಮಾತ್ರೆಗಳನ್ನು ಕೊಟ್ಟು ಕಡಿಮೆ ಮಾಡಿದರೆ, ಪೋಷಕರು, ತಂದೆ ತಾಯಿಗಳು, ಗೆಳೆಯರ ಬಳಗ ಎಲ್ಲರೂ ಸೇರಿ ತಮ್ಮ ಮಾತುಗಳ ಮಾತ್ರೆಗಳಿಂದ ಈ ಪರೀಕ್ಷಾ ಜ್ವರವನ್ನು ಏರುವಂತೆ ಮಾಡಿಬಿಡುತ್ತಾರೆ. ಅವರಿವರ ಮಕ್ಕಳೊಂದಿಗೆ ತಮ್ಮ ಮಕ್ಕಳನ್ನು ಹೋಲಿಸಿ ಮೂದಲಿಸುತ್ತಾ ಮಕ್ಕಳ ಆತಂಕವನ್ನು ಹೆಚ್ಚಿಸಿ ತಾವು ಆತಂಕ ಗೊಳ್ಳುವ ಪೋಷಕರು, ತಂದೆ ತಾಯಿಗಳು ಒಂದು ಕಡೆಯಾದರೆ, ಅದು ಓದಬೇಕು ಇದು ಓದಬೇಕು ರಾತ್ರಿಯೆಲ್ಲ ಎದ್ದು ಓದಬೇಕು ಇಲ್ಲದಿದ್ದರೆ ರಿವಿಜನ್ ಮಾಡಲು ಸಾಧ್ಯವಿಲ್ಲ ಎಂದು ಬಡಬಡಿಸುತ್ತಾ ಭಯಪಡಿಸುವ ಗೆಳೆಯರ ಬಳಗ ಮತ್ತೊಂದು ಕಡೆ. ಇಂಥ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗುವುದು ಸಹಜ.

ಅದೇ ಪುಸ್ತಕಗಳು, ಅದೇ ಉಪಾಧ್ಯಾಯರು, ಅದೇ ತರಗತಿ, ಆದರೂ ಕೆಲವರು ಹೆಚ್ಚು ಹೆಚ್ಚು ಅಂಕಗಳು ಗಳಿಸಿದರೆ ಕೆಲವರು ಉತ್ತೀರ್ಣರಾಗುವುದೂ ಕಷ್ಟ. ಯಾಕೆ ಹೀಗೆ? ಇದಕ್ಕೆ ದೃಷ್ಟಾಂತವಾಗಿ ಒಂದು ಪುಟ್ಟ ಕಥೆ ಇದೆ. ಒಬ್ಬ ರಾಜನಿಗೆ ಒಂದು ಧರ್ಮ ಸಂದೇಹ ಕಾಡಲು ಪ್ರಾರಂಭವಾಯಿತು. ದೇವರು ದಯಾಮಯ, ಆತನಿಗೆ ಯಾವುದೇ ಪಕ್ಷಪಾತವಿಲ್ಲ, ಆತನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂದು ಹೇಳುತ್ತಾರೆ ಆದರೆ ಈ ಜಗದಲ್ಲಿ ಕೆಲವರು ಅತಿ ಸಂಪನ್ನರಾಗಿ ಕೆಲವರು ಬಡವರಾಗಿ ಕೆಲವರು ಆರೋಗ್ಯವಂತರಾಗಿ ಕೆಲವರು ಅಂಗವಿಕಲರಾಗಿ ಏಕೆ ಜನಿಸುತ್ತಾರೆ? ಇದು ದೇವರ ಪಕ್ಷಪಾತವಲ್ಲವೇ? ಇದೇ ರಾಜನ ಸಂದೇಹ. ಎಂಥ ಪಂಡಿತೋತ್ತಮರಲ್ಲೂ ರಾಜನ ಸಂದೇಹಕ್ಕೆ ಉತ್ತರ ದೊರೆಯಲಿಲ್ಲ. ಆಗ ಒಬ್ಬ ಯುವಕ ರಾಜಾಸ್ಥಾನವನ್ನು ಪ್ರವೇಶಿಸಿ ತಾನು ರಾಜನ ಸಂದೇಹ ನಿವಾರಣೆ ಮಾಡುವುದಾಗಿಯೂ ಅದಕ್ಕೆ ಒಂದು ಬೀಸುವ ಕಲ್ಲು ಮತ್ತು ಸ್ವಲ್ಪ ಹೆಸರುಕಾಳನ್ನು ತರಿಸಿಕೊಡಬೇಕೆಂದು ರಾಜನನ್ನು ಕೇಳಿಕೊಳ್ಳುತ್ತಾನೆ. ಅದರಂತೆ ತರಿಸಿಕೊಟ್ಟಾಗ ಒಂದು ಹಿಡಿ ಹೆಸರುಕಾಳನ್ನು ಬೀಸುವ ಕಲ್ಲಿನಲ್ಲಿ ಹಾಕಿ ನಾಲ್ಕೈದು ಬಾರಿ ತಿರುಗಿಸಿ ಮೇಲಿನ ಕಲ್ಲನ್ನು ಎತ್ತಿ, "ರಾಜಾ! ಕಾಳುಗಳು ಹೇಗಿವೆ?" ಎಂದು ಪ್ರಶ್ನಿಸಿದ. ರಾಜನು ಕೆಲವು ಪುಡಿಯಾಗಿವೆ, ಕೆಲವು ಅರ್ಧ ಹೋಳಾಗಿವೆ, ಕೆಲವು ಮಾತ್ರ ಹಾಗೆಯೇ ಇವೆ ಎಂದು ಉತ್ತರಿಸಿದ. ಅದನ್ನು ಕೇಳಿದ ಯುವಕ ಹೀಗೆಂದ, "ರಾಜಾ! ಬೀಸುವ ಕೈಗೆ ಎಲ್ಲಾ ಕಾಳುಗಳು ಒಂದೇ. ಆದರೂ ಕೆಲವು ಪುಡಿಯಾಗಿ, ಕೆಲವು ಅರ್ಧ ಹೋಳಾಗಿ, ಕೆಲವು ಇಡಿಯಾಗಿ ಉಳಿದಿವೆ. ಅದು ಆಯಾ ಕಾಳುಗಳ ಸಾಮರ್ಥ್ಯವನ್ನು ಅವಲಂಬಿಸಿದೆ. ಹಾಗೆಯೇ ಬೀಸುವ ಕಲ್ಲಿನ ಕೆಳಭಾಗ ಭೂಮಿ, ಮೇಲ್ಭಾಗ ಆಕಾಶ, ನಾವೆಲ್ಲ ಹೆಸರು ಕಾಳುಗಳೆಂದು ಬಗೆದರೆ, ದೇವರು ಬೀಸುವ ಕೈ ಇದ್ದಂತೆ. ಅವನಿಗೆ ಯಾವ ಭೇದವೂ ಇಲ್ಲ. ನಮ್ಮ ನಮ್ಮ ಆರ್ಜಿತ ಕರ್ಮ ಫಲಾನುಸಾರ ಸುಖ ದುಃಖಗಳನ್ನು ಅನುಭವಿಸಬೇಕು." ಇದನ್ನು ಕೇಳಿದ ರಾಜ ಭಲೇ ಭಲೆ ಎಂದು ತಲೆದೂಗಿದನಂತೆ.



ಗಾಯತ್ರಿ ಕುಲಕರ್ಣಿ
ಲೇಖಕರು, ಹೊಸಪೇಟೆ

Scan For Digital Colourful
HAMPI TIMES E-paper

ಈ ಕಥೆಯನ್ನು ವಿದ್ಯಾರ್ಥಿಗಳಿಗೆ ಅನ್ವಯಿಸಿದಾಗ ಒಂದೇ ತರಗತಿಯಲ್ಲಿ ಒಂದೇ ಉಪಾಧ್ಯಾಯರು ಹೇಳುವ ಪಾಠವನ್ನು ಕೇಳಿದರೂ, ಅವರವರ ಏಕಾಗ್ರತೆ ನೆನಪಿನ ಶಕ್ತಿ ಓದುವ ಆಸಕ್ತಿಗಳಿಗೆ ಅನುಸಾರವಾಗಿ ಪ್ರಗತಿ ಹೊಂದುತ್ತಾರೆ ಎಂದು ಭಾವಿಸಬಹುದು. ಹಾಗಾದರೆ ತಮ್ಮ ಸಾಮರ್ಥ್ಯವನ್ನು ಅರೆಯುವ ಬಗೆ ಯಾವುದು?

ಗೆಳೆಯರೇ ಅದಕ್ಕೆ ಕೆಲವು ಉಪಾಯಗಳು ಇಲ್ಲಿವೆ. ಮೊದಲನೆಯದಾಗಿ ನೀವು ಓದುತ್ತಿರುವುದು ಯಾಕೆ ಮತ್ತು ಯಾರಿಗಾಗಿ ಎನ್ನುವುದು ಪ್ರಾಮಾಣಿಕವಾಗಿ ತಿಳಿದುಕೊಳ್ಳಿ. ಜ್ಞಾನಾರ್ಜನೆಗಾಗಿ ಮತ್ತು ನಮಗಾಗಿ ಎಂದು ಉತ್ತರ ಬಂದರೆ ನೀವು ಮೊದಲ ಹಂತವನ್ನು ದಾಟಿದ ಹಾಗೇ. ಎಲ್ಲರೂ ಓದುತ್ತಾರೆ ನಾವು ಓದುತ್ತಾ ಇದ್ದೀವಿ ಮತ್ತು ನಮ್ಮ ತಂದೆ ತಾಯಿಗಳು ಓದಬೇಕು ಎನ್ನುತ್ತಾರೆ ಎನ್ನುವುದು ನಿಮ್ಮ ಉತ್ತರವಾದರೆ ನಿಮ್ಮ ಮನಸ್ಸು ಪಕ್ವವಾಗಿಲ್ಲವೆಂದು ತಿಳಿಯಿರಿ. ನೀವು ಓದಬೇಕಾಗಿರುವುದು ಕೇವಲ ನಿಮಗಾಗಿ. ಅದರಿಂದ ಬೇರೆ ಯಾರೋ ಉದ್ಧಾರವಾಗುವುದಿಲ್ಲ. ಇದು ಪ್ರತಿ ವಿದ್ಯಾರ್ಥಿ ಮೊದಲು ತಿಳಿಯಬೇಕಾಗಿರುತ್ತದೆ.

ಗೆಳೆಯರೇ ನೀವ್ಯಾರು ಕಷ್ಟಪಟ್ಟು ಓದಬೇಡಿ ಇಷ್ಟವಾಗಿ ಓದುವುದನ್ನು ಪ್ರಾರಂಭಿಸಿ. ಬಹಳಷ್ಟು ವಿದ್ಯಾರ್ಥಿಗಳಿಗೆ ಓದಬೇಕೆಂದು ಆಸೆ ಇರುತ್ತದೆ. ಆದರೆ ಹೇಗೆ ಓದಬೇಕೆನ್ನುವುದು ತಿಳಿದಿರುವುದಿಲ್ಲ. ಅಂತವರಿಗೆ ಸ್ವಲ್ಪ ಮಾರ್ಗದರ್ಶನ ಸಿಕ್ಕರೆ ಒಳ್ಳೆಯ ಯಶಸ್ಸು ಪಡೆಯುತ್ತಾರೆ. ಹಾಗೆ ಮಾರ್ಗದರ್ಶನ ನೀಡುವ ಚಿಕ್ಕ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

ಪ್ರತಿಯೊಂದು ವಿದ್ಯಾರ್ಥಿಯ ಸಾಮರ್ಥ್ಯಗಳು ಮತ್ತು ಸಮಸ್ಯೆಗಳು ಬೇರೆ ಬೇರೆ ರೀತಿಯದ್ದಾಗಿರುತ್ತದೆ. ಕೆಲವರಿಗೆ ಏಕಾಗ್ರತೆಯ ಸಮಸ್ಯೆಯಾದರೆ ಕೆಲವರಿಗೆ ನೆನಪಿನ ಸಮಸ್ಯೆ. ಇನ್ನೂ ಕೆಲವರಿಗೆ ಸಮಯದ ಅಭಾವ. ಹೀಗೆ ಒಬ್ಬೊಬ್ಬರದು ಒಂದೊಂದು ರೀತಿಯಾಗಿರುತ್ತದೆ. ಇದನ್ನು ತಿಳಿಯುವುದು ಹೇಗೆ? ಅದಕ್ಕಾಗಿ ಪ್ರತಿಯೊಬ್ಬರೂ ಈ ಕೆಳಕಂಡ ಪ್ರಶ್ನೆಗಳನ್ನು ನಿಮಗೆ ನೀವೇ ಕೇಳಿಕೊಂಡು ಉತ್ತರಗಳನ್ನು ಪಡೆಯಿರಿ.

**1. ನನ್ನ ಸಮಸ್ಯೆ ಯಾವುದು?**
ಉದಾ: ಏಕಾಗ್ರತೆ ಇಲ್ಲದಿರುವುದು, ಪಾಠ ಅರ್ಥವಾಗದಿರುವುದು,ಓದಿದ್ದು ನೆನಪಿಗೆ ಬಾರದಿರುವುದು ಮುಂತಾದವು.

**2. ಸಮಸ್ಯೆಗೆ ಕಾರಣವೇನು?**
ಉದಾ: ಚಂಚಲ ಸ್ವಭಾವ, ದೈಹಿಕ ತೊಂದರೆಗಳು, ಮಾನಸಿಕ ಗೊಂದಲಗಳು ಮುಂತಾದವು.

**3.ಸಮಸ್ಯೆಯನ್ನುನಿವಾರಿಸಲುವಿವಿಧಉಪಾಯಗಳಾವುವು?**
ಉದಾ: ಆತ್ಮಾವಲೋಕನ, ವೈದ್ಯಕೀಯ ತಪಾಸಣೆ, ಹಿರಿಯರಿಂದ ಮಾರ್ಗದರ್ಶನ ಮುಂತಾದವು.

**4. ಈ ಉಪಾಯಗಳಲ್ಲಿ ನಿಮಗೆ ಯಾವುದು ಸರಿಹೊಂದು ಬಹುದು?**
ಈ ರೀತಿಯಾಗಿ ನಿಮ್ಮನ್ನು ನೀವೇ ಪ್ರಶ್ನಿಸಿಕೊಂಡು ಸಮಸ್ಯೆಯನ್ನು ಅರಿತಾಗ ಅದನ್ನು ನಿವಾರಿಸಿಕೊಳ್ಳುವುದು ಸುಲಭವಾಗುತ್ತದೆ. ಇದರ ಜೊತೆಗೆ ನಿಮ್ಮ ಪಠ್ಯವನ್ನು ನೀವು ಪೂರ್ತಿಯಾಗಿ ತಿಳಿದುಕೊಳ್ಳುವುದು ಸಹ ಅತಿ ಮುಖ್ಯವಾಗಿರುತ್ತದೆ. ನೀವು ಓದಬೇಕಾದದ್ದು ಎಷ್ಟು? ಅದರಲ್ಲಿ ಈಗಾಗಲೇ ನೀವು ಓದಿರುವುದೆಷ್ಟು? ಇನ್ನು ಉಳಿದದ್ದೆಷ್ಟು? ಇದನ್ನು ತಿಳಿದಾಗ ಮಾತ್ರ ಇರುವ ಸಮಯವನ್ನು ಉಪಯುಕ್ತವನ್ನಾಗಿ ಮಾಡಿಕೊಳ್ಳುವುದು ಹೇಗೆ ಎನ್ನುವುದು ಯೋಚಿಸಬಹುದು.

ಗೆಳೆಯರೇ ಮುಂದಿನ ಸಂಚಿಕೆಯಲ್ಲಿ ಓದುವ ವಿಧಾನಗಳ ಬಗ್ಗೆ ತಿಳಿಯುವ ಮೊದಲು ನೀವೆಲ್ಲರೂ ನಿಮ್ಮ ನಿಮ್ಮ ಸಾಮರ್ಥ್ಯ/ ಸಮಸ್ಯೆಗಳನ್ನು ಅರಿಯುವ ಪ್ರಯತ್ನ ಮಾಡುತ್ತಿರೆಂದು ಆಶಿಸೋಣ.

---

## ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

**ಮೊದಲ ಪುಟದಿಂದ**
ಬ್ಯಾಂಕ್ ಪಾಸ್ ಬುಕ್ ಉಳಿತಾಯ ಖಾತೆಯ ವಿವರಗಳೊಂದಿಗೆ ಹಾಜರಾಗಬೇಕು.
**ನಿಯಮಗಳು:** ಒಬ್ಬ ಕ್ರೀಡಾಪಟು ಅಥವಾ ತಂಡ ಯಾವುದೇ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ನಂತರ ಬೇರೆ ಯಾವುದೇ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸಲು ಅವಕಾಶವಿಲ್ಲ. ಅಂತಹ ಪ್ರಕರಣವೇನಾದರೂ ದಾಖಲಾದಲ್ಲಿ, ಆಕ್ಷೇಪಣೆಯಾದಲ್ಲಿ ಅಥವಾ ಗಮನಕ್ಕೆ ಬಂದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು, ತಾಲೂಕು ಮಟ್ಟದಲ್ಲಿ ಆಯ್ಕೆಯಾದ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಮತ್ತು ಗುಂಪು ಆಟಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಲು ಅರ್ಹರಾಗಿ ರುತ್ತಾರೆ. ಕರ್ನಾಟಕ ರಾಜ್ಯದಲ್ಲಿ ವಾಸಿಸುವ ಕ್ರೀಡಾಪಟುಗಳು ಮಾತ್ರ ಅರ್ಹರಿದ್ದು, ಕಡ್ಡಾಯವಾಗಿ ಆಧಾರ್ ಕಾರ್ಡ್ ಸಲ್ಲಿಸಬೇಕು. ರಕ್ಷಣಾಪಡೆ, ಅರೆ ರಕ್ಷಣಾಪಡೆಗೆ ಸೇರಿದ ಕ್ರೀಡಾಪಟುಗಳು ಭಾಗವಹಿಸಲು ಅರ್ಹರಲ್ಲ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆದ ಕ್ರೀಡೆಗಳಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಮತ್ತು ಗುಂಪು ಆಟಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳು ವಿಭಾಗ ಮಟ್ಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಮೊ.ನಂ: 9731433373, 7026101408, 9986623577, 9483480101 ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳ ನೇಮಕಾತಿಯಲ್ಲಿ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗದಿರಿ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ನೇಮಕಾತಿ ವಿಚಾರದಲ್ಲಿ ಮಧ್ಯವರ್ತಿಗಳಿಗೆ ಹಣ ನೀಡಿ ಮೋಸ ಹೋಗಬಾರದು ಎಂದು ಹಗರಿಬೊಮ್ಮನಹಳ್ಳಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ತಿಳಿಸಿದ್ದಾರೆ.
ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಖಾಲಿ ಇದ್ದ, 6 ಅಂಗನವಾಡಿ ಕಾರ್ಯಕರ್ತೆ ಮತ್ತು 30 ಸಹಾಯಕಿಯರ ಹುದ್ದೆಗೆ ಈ ಹಿಂದೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು, ನೇಮಕಾತಿಯ ವಿಚಾರದಲ್ಲಿ ಮಧ್ಯವರ್ತಿಗಳು ಹಾಗೂ ಕೆಲವು ಸಂಘಟನೆಯ ಹೆಸರುಗಳನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ ನೇಮಕಾತಿ ಮಾಡಿಕೊಡುತ್ತೇವೆ ಎಂದು ಹಣ ವಸೂಲಿ ಮಾಡುತ್ತಿರುವುದು ಮತ್ತು ಮಧ್ಯವರ್ತಿಗಳು ನೇಮಕಾತಿಯ ಪ್ರಕ್ರಿಯೇಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಕೇಳಿ ಬರುತ್ತಿದೆ. ನೇಮಕಾತಿ ಪ್ರಕ್ರಿಯೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಪರಿಶೀಲಿಸಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಕಾತಿ ಮಾಡಲಾಗುವುದು. ನೇಮಕಾತಿಯು ಸಂಪೂರ್ಣವಾದ ಪಾರದರ್ಶಕತೆಯಿಂದ ಕೂಡಿರುತ್ತದೆ. ಹಾಗಾಗಿ ಸಾರ್ವಜನಿಕರು ಯಾವುದೇ ಮೋಸದ ಜಾಲಕ್ಕೆ ಒಳಗಾಗಬಾರದು ಎಂದು ಪ್ರಕಟಣೆ ತಿಳಿಸಿದೆ.

**ದಸರಾ ಹಬ್ಬದ ಜಾಹೀರಾತು ನೀಡಲು ಸಂಪರ್ಕಿಸಿ : 9448633038**

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

## ಸಾಧನೆಯ ಶಿಖರವೇರಲು ಶಿಕ್ಷಣ ಪಡೆಯಬೇಕು



**ಮೊದಲ ಪುಟದಿಂದ**
ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಎಲ್ಲಾ ರಂಗಗಳಲ್ಲಿ ಪುರುಷರಿಗಿಂತ ಮಹಿಳೆಯರೇ ಎಲ್ಲಾ ರಂಗಗಳಲ್ಲಿ ಹೆಚ್ಚು ಸ್ಥಾನಮಾನ ಹೊಂದುತ್ತಿದ್ದಾರೆ. ಹಾಗಾಗಿ ಸಾಧನೆ ಮಾಡುವ ಹಂಬಲ ಎಲ್ಲರಲ್ಲೂ ಮೂಡಬೇಕು ಎಂದು ಹೇಳಿದರು.

ಪ್ರಸ್ತುತದಲ್ಲಿ ಪ್ರೇಮ-ವಿವಾಹ ಪ್ರಕರಣಗಳಿಂದ ಹದಿ-ಹರೆಯದವರ ಜೀವನ ಹಾಳಾಗುತ್ತಿದೆ. ಹಾಗಾಗಿ ಹೆಣ್ಣುಮಕ್ಕಳು ಜಾಗೃತರಾಗಬೇಕು. ಶಿಕ್ಷಣದಿಂದ ನಿರ್ದಿಷ್ಟ ಗುರಿ ಹೊಂದಿ, ಸಮಾಜದಲ್ಲಿ ಉನ್ನತ ಸ್ಥಾನ-ಮಾನ ಹೊಂದಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರತಿಯೊಬ್ಬರೂ ಜವಾಬ್ದಾರಿಯುತ ನಾಗರಿಕನಾಗಬೇಕು. ಸಾಧನೆಗೈದ ಅನೇಕ ಮಹನೀಯರ ದಾರ್ಶನಿಕ ಬದುಕನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳಬೇಕು. ಇಂತಹ ಸಮಾವೇಶ ಕಾರ್ಯಕ್ರಮದ ಮಹತ್ವ ಹೊಂದಿ, ತಮ್ಮ ಗ್ರಾಮ, ಮನೆ, ಕುಟುಂಬದ ಸದಸ್ಯರಿಗೂ ತಿಳಿಸಬೇಕು ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ವಕೀಲರಾದ ಶಿವಲೀಲಾ, ನಿವೃತ್ತ ತಾಲ್ಲೂಕು ವೈದ್ಯಾಧಿಕಾರಿ ಡಾ.ಮೋಹನ ಕುಮಾರಿ, ಕೌಲ್‌ಬಜಾರ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸುಭಾಷ್ ಚಂದ್ರ, ಗಾಂಧಿನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದರಾಮೇಶ್ವರ ಕಡೇದ, ಬಳ್ಳಾರಿ ಸಂಚಾರಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಅಯ್ಯನಗೌಡ ಪಾಟೀಲ್ ಅವರು ವಿವಿಧ ವಿಷಯಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನವೀನ ಕುಮಾರ್, ಡಿವೈಎಸ್‌ಪಿ ಹಾಗೂ ಎಸ್‌ಜೆಪಿಯು ಹಿರಿಯ ಮಕ್ಕಳ ಕಲ್ಯಾಣಾಧಿಕಾರಿ ಚಂದ್ರಕಾಂತ ನಂದಾ ರೆಡ್ಡಿ, ರೈಲ್ವೇ ಪೊಲೀಸ್ ಅಧಿಕಾರಿ ವಿಜಯಲಕ್ಷ್ಮೀ, ಜಿಲ್ಲಾಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ, ರೀಡ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸಿ.ತಿಪ್ಪೇಶಪ್ಪ, ರೀಡ್ಸ್ ಸಂಸ್ಥೆಯ ಯೋಜನಾ ವ್ಯವಸ್ಥಾಪಕಿ ಕೆ.ಸೀತಾಮಹಾಲಕ್ಷ್ಮೀ, ಕಾರ್ಯಕ್ರಮ ವ್ಯವಸ್ಥಾಪಕಜಗತಾಪ್,ತಾಲ್ಲೂಕುಸಂಯೋಜಕರಾದ ಶಿಲ್ಪಾ, ಕೆ.ಎಂ.ತಿಪ್ಪೇಸ್ವಾಮಿ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು, ಯುವಕ-ಯುವತಿಯರು ಮತ್ತು ಸ್ವ-ಸಹಾಯ ಸಂಘದ ಮಹಿಳೆಯರು, ಇನ್ನಿತರರು ಉಪಸ್ಥಿತರಿದ್ದರು.

**ಅರಿವು ಮೂಡಿಸಿದ ಜಿಲ್ಲಾ ಮಟ್ಟದ ಜಾಗೃತಿ ಜಾಥಾ:** ಬಾಲ್ಯ ವಿವಾಹ ನಿಷೇಧ, ಲಿಂಗ ತಾರತಮ್ಯ, ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಜಿಲ್ಲಾ ಮಟ್ಟದ ಜಾಗೃತಿ ಜಾಥಾ ನಡೆಯಿತು.

ಜಾಥಾಗೆ ಎಸ್‌ಪಿ ಕಚೇರಿ ಆವರಣದಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ ಅವರು ಚಾಲನೆ ನೀಡಿದರು.

ಜಾಥಾದಲ್ಲಿ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸ್ವ-ಸಹಾಯ ಸಂಘ ಸಂಸ್ಥೆಗಳ ಮಹಿಳೆಯರು ಭಾಗವಹಿಸಿ 'ನಿಲ್ಲಿಸಿ, ನಿಲ್ಲಿಸಿ, ಬಾಲ್ಯ ವಿವಾಹ ನಿಲ್ಲಿಸಿ...' 'ಮಕ್ಕಳನ್ನು ಶಾಲೆಗೆ ಕಳುಹಿಸಿ', 'ದುಡಿಮೆ ಬೇಡ ಶಾಲೆ ಬೇಕು' ಎನ್ನುವ ಘೋಷಣೆಗಳನ್ನು ಕೂಗಿದರು.

ಜಾಥಾವು ಎಸ್‌ಪಿ ಕಚೇರಿ ಮುಂಭಾಗದಿಂದ ಗಡಗಿ ಚೆನ್ನಪ್ಪ ವೃತ್ತ, ಜಿಲ್ಲಾಧಿಕಾರಿ ಕಚೇರಿ ಮೂಲಕ ಬಿಡಿಎಎ ಫುಟ್‌ಬಾಲ್ ಮೈದಾನದ ವೇದಿಕೆ ಕಾರ್ಯಕ್ರಮದವರೆಗೆ ತಲುಪಿ ಸಂಪನ್ನಗೊಂಡಿತು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**26–09–2024 – ಗುರುವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುನರ್ವಸು |
| ಯೋಗ | : ಪರಿಘ |
| ಕರಣ | : ಗರಜ |
| ಸೂರ್ಯೋದಯ | : 06:18:03 |
| ಸೂರ್ಯಾಸ್ತ | : 18:17:49 |
| ರಾಹು ಕಾಲ | : 13:48–15:18 |
| ಯಮಘಂಡ ಕಾಲ | : 06:18–07:48 |
| ಗುಳಿಕ ಕಾಲ | : 09:18–10:48 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 25–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.86 ಅಡಿ |
| ಒಳ ಹರಿವು | 6921 ಕ್ಯುಸೆಕ್ |
| ಹೊರ ಹರಿವು | 10119 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.226 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1619.61 ಅಡಿ |
| ಒಳ ಹರಿವು | 2346 ಕ್ಯುಸೆಕ್ |
| ಹೊರ ಹರಿವು | 9802 ಕ್ಯುಸೆಕ್ |
| ಸಾಮರ್ಥ್ಯ | 60.243 ಟಿಎಂಸಿ |

# ಇ-ಆಸ್ತಿ ತಂತ್ರಾಂಶದಿಂದ ಆಸ್ತಿ ಮಾಹಿತಿ

## ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ಥಿಗಳ ನೋಂದಣಿಗೆ ಇ–ಆಸ್ತಿ ತಂತ್ರಾಂಶದ ಮಾಹಿತಿ ಕಡ್ಡಾಯ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ । ಕಾವೇರಿ2.0 ತಂತ್ರಾಂಶ ಪ್ರಾಯೋಗಿಕವಾಗಿ ಯಶಸ್ವಿ

■ **ಹಂಪಿ ಟೈಮ್ಸ್ ಹೊಸಪೇಟೆ**

7–10–2024 ರಿಂದ ವಿಜಯನಗರ ಜಿಲ್ಲಾ ವ್ಯಾಪ್ತಿಯ ಎಲ್ಲಾ ಉಪನೋಂದಣಿ ಕಚೇರಿಗಳಲ್ಲಿ ನಗರ ಸ್ಥಳಿಯ ಸಂಸ್ಥೆಗಳ ಆಸ್ತಿಯನ್ನು ನೋಂದಾಯಿಸಲು ಆಸ್ತಿಯ ಮಾಹಿತಿ ಒುು್ುನ್ು ಕಡ್ಡಾಂುವಾಗಿ ಇ-ಆಸ್ತಿ ತಂತ್ರಾಂಶ ದಿಂದಲೇ ಪಡೆಯ ಬೇಕಿದ್ದು, ವಿಜಯ ನಗರ ಜಿಲ್ಲೆಯ ಸಾರ್ವಜನಿ ಕರು ಇ-ಆಸ್ತಿ ಸಂಯೋಜನೆಯ ಸದುಪ ಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



ಇ-ಖಾತಾ ಸಂಯೋಜನೆಯಿಂದ ಸಾರ್ವಜನಿಕರಿಗೆ ಸಾಕಷ್ಟು ಉಪಯೋಗಗಳಿವೆ. ಇ–ಆಸ್ತಿ ತಂತ್ರಾಂಶದಿಂದಾಗಿ ಸ್ವತ್ತುಗಳ ನೋಂದಣಿ ವೇಳೆ ಸಾರ್ವಜನಿಕರು ಮೋಸ ಹೋಗುವುದನ್ನು ತಡೆಯುವುದು., ಇ–ಖಾತಾದಿಂದ ಮಾತ್ರ ಸ್ವತ್ತಿನ ಸ್ವರೂಪ ಮತ್ತು ನೈಜ ಮಾಲೀಕರನ್ನು ಗುರುತಿಸಲು ಸಾಧ್ಯವಾಗುತ್ತದೆ. ನೈಜ ಮಾಲೀಕರಿಗೆ ವಂಚಿಸಿ ಬೇರೆಯವರಿಂದ ಸ್ವತ್ತುಗಳ ನೋಂದಣಿಯನ್ನು ತಪ್ಪಿಸುವುದು., ಸ್ವತ್ತುಗಳ ಖರೀದಿದಾರರಿಗೆ ಸ್ವತ್ತಿನ ನೈಜ ಮಾಲೀಕರನ್ನು ಗುರುತಿಸುವುದು. ಮತ್ತು ಭವಿಷ್ಯದಲ್ಲಿ ಉಂಟಾಗಬಹುದಾದ ವ್ಯಾಜ್ಯ, ಕಾನೂನು ತೊಂದರೆಗಳನ್ನು ತಪ್ಪಿಸಬಹುದಾಗಿದೆ.

ನಗರಾಭಿವೃದ್ಧಿ ಇಲಾಖೆಯು ವಿಜಯನಗರ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿಗಳ ಹಕ್ಕು ವರ್ಗಾವಣೆಗೆ ಸಂಬಂಧಿಸಿದಂತೆ ಇ–ಆಸ್ತಿ ತಂತ್ರಾಂಶ ಮತ್ತು ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲು ಸಮ್ಮತಿ ನೀಡಿರುತ್ತಾರೆ. ಮುಂದುವರೆದು ವಿಜಯನಗರ ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ಥಿಗಳ ನೋಂದಣಿಯನ್ನು ಇ–ಆಸ್ತಿ ತಂತ್ರಾಂಶದಿಂದ ಕಡ್ಡಾಯವಾಗಿ ಮಾಹಿತಿ ಪಡೆದು ನೋಂದಾಯಿಸಲು ಇ–ಆಸ್ತಿ ತಂತ್ರಾಂಶವನ್ನು ಕಾವೇರಿ–2 ತಂತ್ರಾಂಶದೊಂದಿಗೆ 7.10.2024 ರಿಂದ ಜಾರಿ ಬರುವಂತೆ ಸರ್ಕಾರವು ಆದೇಶಿಸಿದೆ. ದಿನಾಂಕ: 7–10–2024 ರಿಂದ ವಿಜಯನಗರ ಜಿಲ್ಲಾ ವ್ಯಾಪ್ತಿಯ ಎಲ್ಲಾ ಉಪನೋಂದಣಿ ಕಚೇರಿಗಳಲ್ಲಿ ನಗರ ಸ್ಥಳಿಯ ಸಂಸ್ಥೆಗಳ ಆಸ್ತಿಯನ್ನು ನೊಂದಾಯಿಸಲು ಆಸ್ತಿಯ ಮಾಹಿತಿಯನ್ನು ಕಡ್ಡಾಯವಾಗಿ ಇ–ಆಸ್ತಿ ತಂತ್ರಾಂಶದಿಂದಲೇ ಪಡೆಯಬೇಕಿರುತ್ತದೆ.

ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ 2006 ರಿಂದಲೇ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶವನ್ನುಸಂಯೋಜನೆಮಾಡಲಾಗಿರುತ್ತದೆ. ಹಾಗೂ ಜಮೀನಿನ ಸರ್ವೆ ನಕ್ಷೆ (ಸ್ಕೆಚ್)–ನಮೂನೆ 11 ಇ ಇರುವ ಮೋಜಣಿ ತಂತ್ರಾಂಶದೊಂದಿಗೆ ಹಾಗೂ ಕಾವೇರಿ ತಂತ್ರಾಂಶವನ್ನು ದಿನಾಂಕ 05–10–2016ರಿಂದ ಸಂಯೋಜನೆ ಮಾಡಲಾಗಿದೆ ಹಾಗೂ ಗ್ರಾಮ ಪಂಚಾಯತ ವ್ಯಾಪ್ತಿಯ ಕೃಷಿಯೇತರ ಸ್ವತ್ತುಗಳ ದಸ್ತಾವೇಜುಗಳ ನೋಂದಣಿಗಾಗಿ ಇ–ಸ್ವತ್ತು ತಂತ್ರಾಂಶವನ್ನು 18–07–2014ರ ಸುತ್ತೋಲೆಯಂತೆ ಸಂಯೋಜನೆಗೊಳಿಸಲಾಗಿದೆ. ಈ ಮೇಲೆ ಕಾಣಿಸಿದ ಆಸ್ತಿಗಳನ್ನು ಹೊರತುಪಡಿಸಿ ಅಂದರೆ ನಗರ ಪ್ರದೇಶಗಳಲ್ಲಿನ ಕೃಷಿಯೇತರ ಆಸ್ತಿಗಳಿಗೆ ಸಂಬಂಧಿಸಿದಂತೆ ಇ–ಆಸ್ತಿ (ತಂತ್ರಾಂಶ) ವನ್ನು ರೂಪಿಸಿದ್ದು ಇ–ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ 2.0 ತಂತ್ರಾಂಶದೊಂದಿಗೆ ಪ್ರಾಯೋಗಿಕವಾಗಿ ರಾಮನಗರ ಮತ್ತು ಕನಕಪುರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಾವೇರಿ–2.0 ತಂತ್ರಾಂಶದೊಂದಿಗೆ ಸಂಯೋಜನೆ ಮಾಡಿ 29–01–2020 ರಿಂದ ನೋಂದಣಿ ಮಾಡುತ್ತಿರುವುದು ಯಶಸ್ವಿಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಇಂದು ಹಂಪಿಯಲ್ಲಿ ನಡಿಗೆ

## ನಾಳೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಮುಜರಾಯಿ ಇಲಾಖೆ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಇವರ ಸಹಯೋಗದೊಂದಿಗೆ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮವನ್ನು ಸೆ.27ರಂದು ಸಂಜೆ 4 ಗಂಟೆಗೆ ಹಂಪಿಯ ಶ್ರೀ ಪಂಪಾ ವಿರೂಪಾಕ್ಷೇಶ್ವರ ದೇವಸ್ಥಾನ ಮುಂಭಾಗದ ರಥ ಬೀದಿಯಲ್ಲಿ ಏರ್ಪಡಿಸಲಾಗಿದೆ.

ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಹೆಚ್.ಆರ್. ಗವಿಯಪ್ಪ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಸಂಸದ, ಶಾಸಕರು, ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು ಉಪಸ್ಥಿತರಿರುವರು.

ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಡಾ.ರಾಜೇಂದ್ರ ಕೆ.ವಿ., ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್ ಹಾಗೂ ಹಂಪಿ ವೃತ್ತದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಪುರಾತತ್ವ ಅಧೀಕ್ಷಕರಾದ ನಿಹಿಲ್ ದಾಸ್ ಉಪಸ್ಥಿತರಿರುವರು. ಸಹಾಯಕ ಪ್ರಾಧ್ಯಾಪಕರಾದ ಡಾ. ಶಿವನಗೌಡ ಸಾತಮಾರ ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಪ್ರಭುಲಿಂಗ ಎಸ್. ತಳಕೇರಿ ಉಪಸ್ಥಿತರಿರುವರು.

**ಪಾರಂಪರಿಕ ನಡಿಗೆ:** ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ಸೆ.26ರಂದು ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ಎದುರು ಬಸವಣ್ಣ ದಿಂದ ಮಾತಂಗ ಪರ್ವತದವರೆಗೆ ಪಾರಂಪರಿಕ ನಡಿಗೆ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

# ನಗರಸಭೆ ಹೊರಗುತ್ತಿಗೆ ನೇಮಕಾತಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆಯಿಂದ ಘನ ತ್ಯಾಜ್ಯವಸ್ತು ನಿರ್ವಹಣೆ ವಿಸ್ತೃತಯೋಜನಾವರದಿಯನುಸಾರ 112 ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು ಟೆಂಡರ್ ಕರೆಲಾಗಿದ್ದು, ಸಾರ್ವನಿಕರು ಮಧ್ಯವರ್ತಿಗಳ ಮೋಸದ ಜಾಲಕ್ಕೆ ಒಳಗಾಗಬಾರದು ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ನಗರಸಭೆಯ ಹೊರಗುತ್ತಿಗೆ ಸಿಬ್ಬಂದಿಯ ಕೆಲಸವನ್ನು ಮಧ್ಯವರ್ತಿಗಳು ಕೊಡಿಸುವುದಾಗಿ ಹೇಳಿ ಹಣ ವಸೂಲಿ ಮಾಡುತ್ತಿರುವುದು ತಿಳಿದುಬಂದಿದ್ದು, ಹೊರಗುತ್ತಿಗೆ ಸಿಬ್ಬಂದಿಯನ್ನು ಟೆಂಡರ್ ಆಧಾರದ ಮೇಲೆ ಸರ್ಕಾರ ನಿಯಮಗಳ ಅನುಸಾರ ಗುತ್ತಿಗೆದಾರರೆ ಪೂರೈಸುತ್ತಾರೆ.

ಸಾರ್ವಜನಿಕರು ಮಧ್ಯವರ್ತಿಗಳಿಗೆ ಹಣ ನೀಡಿ ಮೋಸಹೋಗಿ ನಗರಸಭೆಗೆ ದೂರು ಸಲ್ಲಿಸಿದ್ದಲ್ಲಿ ಅದಕ್ಕೆ ನಗರಸಭೆಯು ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ. ಮೋಸಕ್ಕೆ ಒಳಗಾದವರೆ ನೇರ ಹೊಣೆಯಾಗಿರುತ್ತಾರೆ ಎಂದು ನಗರಸಭೆಯ ಪ್ರಕಟಣೆ ತಿಳಿಸಿದೆ.

# ಡಾ.ಜೆ.ಎಂ.ಸತ್ಯಾನಂದ ನಿಧನ



**ಕೊಟ್ಟೂರು :**
ಪಟ್ಟಣದ ಡಾ.ಜೆ.ಎಂ.ಸತ್ಯಾನಂದ (74) ಬುಧವಾರ ನಿಧನರಾದರು. ಮೃತರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ.
ಮೃತರ ಅಂತ್ಯಕ್ರಿಯೆ ಗುರುವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಗರ್ಭಿಣಿಯರು ಆರೋಗ್ಯದ ಕಾಳಜಿ ವಹಿಸಿ

## ಸಿಡಿಪಿಒ ಸಿಂಧೂ ಅಂಗಡಿ ಹೇಳಿಕೆ। ಹಂಪಿ ಅಂಗನವಾಡಿ ಕೇಂದ್ರದಲ್ಲಿ ಪೋಷಣ ಮಾಸಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಇವರಿಂದ ಕಮಲಾಪುರ–ಬಿ ವಲಯದ ಹಂಪಿ ಅಂಗನವಾಡಿ ಕೇಂದ್ರದಲ್ಲಿ ಮಂಗಳವಾರ ರಾಷ್ಟ್ರೀಯ ಪೋಷಣ ಅಭಿಯಾನದ ಅಡಿ ಪೋಷಣ ಮಾಸಾಚರಣೆ ಕಾರ್ಯಕ್ರಮ ನಡೆಯಿತು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಸಿಂಧೂ ಅಂಗಡಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಪೋಷಣ ಅಭಿಯಾನದ ಅಡಿ ಪೋಷಣ ಮಾಸಾಚರಣೆ ಮಾಡಲಾಗುತ್ತಿದೆ. ಇದರ ಪ್ರಮುಖ ಉದ್ದೇಶ ಅಂಗನವಾಡಿ ಕೇಂದ್ರದ ಫಲಾನುಭವಿಗಾಳದ ಗರ್ಭಿಣಿಯರು, ಭಾಣಂತಿಯರ ಆರೋಗ್ಯದ ಕಾಳಜಿ ವಹಿಸುವುದಾಗಿದೆ ಎಂದು ಹೇಳಿದರು.

ಹಂಪಿ ಆಯೂಷ್ ವೈದ್ಯಾಧಿಕಾರಿ ಶ್ರೀಪ್ರಸಾದಬಾಬು ಮಾತನಾಡಿ, ದೇಹದ ಆರೋಗ್ಯ ಯಾವರೀತಿಯಲ್ಲಿ ಕಾಪಾಡಿ ಕೊಳ್ಳಬೇಕು, ಮಕ್ಕಳಿಗೆ ಹಾಗೂ ಗರ್ಭಿಣಿಯರು ಆಹಾರ ರೀತಿ ಹೇಗಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಂಪಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಜನಿ, ಪಿಡಿಓ ಗಂಗಾಧರ ಹಾಗೂ ಗ್ರಾಮ ಪಂಚಾಯತಿಯ ಸದಸ್ಯರು,ಅಂಗನವಾಡಿಕಾರ್ಯಕರ್ತೆಯರು ಭಾಗವಹಿಸದ್ದರು.

ವಲಯದ ಮೇಲ್ವಿಚಾರಕಿಯರಾದ ಎಲ್.ಡಿ. ನಧಾಫ್ ಅವರು ಪ್ರಾಸ್ತಾವಿಕ ಮಾತನಾಡಿದರು. ಹೇಮಾವತ ನಿರ್ವಹಿಸಿದರು.

ಸೀಮಂತ ಕಾರ್ಯಕ್ರಮ: ಹಂಪಿ ಅಂಗನವಾಡಿ ವ್ಯಾಪ್ತಿಯ ಗರ್ಭಿಣಿಯರಿಗೆ ಇದೇ ವೇಳೆ ಸೀಮಂತ ಕಾರ್ಯಕ್ರಮ ಏರ್ಪಡಿಸಲಾಯಿತು.

# ಕಲಿಕೆಯಲ್ಲಿ ಶ್ರದ್ಧೆವಹಿಸಿದರೆ ಭವಿಷ್ಯ ಉಜ್ವಲ

## ಪ.ಪೂ.ಉಪನ್ಯಾಸಕರ ಸಂಘ ಅಧ್ಯಕ್ಷ ಜಿ.ಬಸವರಾಜ ಹೇಳಿಕೆ। ಪ್ರತಿಭಾ ಪುರಸ್ಕಾರ




■ **ಹಂಪಿ ಟೈಮ್ಸ್ ಕೊಟ್ಟೂರು**

ಪದವಿ ಪೂರ್ವ ಶಾಲಾ ಶಿಕ್ಷಣ, ವಿದ್ಯಾರ್ಥಿಗಳ ಭವಿಷ್ಯದ ಬದಲಾವಣೆಯ ಘಟ್ಟ, ಉಪನ್ಯಾಸಕರು ಇಲ್ಲಿ ಮಾರ್ಗದರ್ಶಕರೇ ವಿನಾ, ಕೈ ಹಿಡಿದು ನಡೆಸುವವರಲ್ಲ, ಕಲಿಕೆಯಲ್ಲಿ ಸ್ವಲ್ಪ ಶ್ರದ್ಧೆ ವಹಿಸಿದ್ದೇ ಆದರೆ ತಮ್ಮ ಭವಿಷ್ಯ ಉಜ್ವಲಗೊಳ್ಳುತ್ತೆ ಎಂದು ಪ.ಪೂ. ಉಪನ್ಯಾಸಕರ ಸಂಘ ಅಧ್ಯಕ್ಷ ಜಿ.ಬಸವರಾಜ ಹೇಳಿದರು.

ಪಟ್ಟಣದ ಗೊರ್ಲಿ ಶರಣಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜ್ ಸಭಾಂಗಣದಲ್ಲಿ ಬುಧವಾರ ಪ.ಪೂ.ಕಾಲೇಜುಗಳ ಉಪನ್ಯಾಸಕ ಸಂಘ ಕೊಟ್ಟೂರು ತಾಲೂಕು ಘಟಕದಿಂದ ಆಯೋಜಿಸಿದ ಶೈಕ್ಷಣಿಕ ಕಾರ್ಯಾಗಾರ ಹಾಗೂ ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ.ಪೂ.ಶಿಕ್ಷಣದ ಮಹತ್ವ ಕುರಿತು ಉಪನ್ಯಾಸ ನೀಡಿದರು. ಪ್ರತಿಯೊಬ್ಬ ಉಪನ್ಯಾಸಕರು ತಮ್ಮ ವಿದ್ಯಾರ್ಥಿಗಳು ಹೆಚ್ಚು ಫಲಿತಾಂಶ ಪಡೆಯಲು, ಉತ್ತಮ ಸಂಸ್ಕಾರ ಸಂಸ್ಕೃತಿ ಕಲಿಯಲು ಹಾಗೂ ಅವರಿಗೆ ಒಳ್ಳೆಯ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ನಿತ್ಯ ಭೋದನೆಯಲ್ಲಿ ತೊಡಗಿಕೊಳ್ಳುವರು. ಜತೆಗೆ ಬದುಕಿನ ಮೌಲ್ಯಗಳನ್ನು ತಿಳಿಸುವರು, ವಿದ್ಯಾರ್ಥಿಗಳು ಅರ್ಥೈಸಿಕೊಂಡು ಕಲಿಕೆಯಲ್ಲಿ ಆಸಕ್ತಿ ತೋರಿದರೆ ಹೆತ್ತವರ ಕನಸು ನನಸಾಗುವುದು ಖಚಿತ ಎಂದರು.

ಸೈನಿಕ ಯು.ಬಿ.ಕೊಟ್ರೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಿಎಸ್‌ಎಫ್ ಪಡೆಯಲ್ಲಿನ ತರಬೇತಿ ಸ್ವಲ್ಪ ಕಠಿಣ ಆದರೂ ಇದು ಹೆಮ್ಮೆಯ ಹುದ್ದೆ, ಬೆರಳೆಣಿಕೆಯಷ್ಟು ಯುವಕರು ಮಾತ್ರ ಈ ಹುದ್ದೆಗೆ ಈ ಭಾಗದಿಂದ ಆಗಮಿಸುತ್ತಿದ್ದಾರೆ, ಇದು ಹೆಚ್ಚಾಗಬೇಕು, ಇಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯು ಸೈನಿಕನಾಗಬೇಕು, ದೇಶ ರಕ್ಷಣೆಗೆ ನಿಲ್ಲಬೇಕು ಎಂದು ಹೇಳಿದರು.

ಕಾಲೇಜ್ ಪ್ರಾಚಾರ್ಯರು ಡಾ.ಜಿ. ಸೋಮಶೇಖರ್, ಭಾಗೀರಥಿ ಕಾಲೇಜ್ ಪ್ರಾಚಾರ್ಯರಾದ ನಿರ್ಮಲಾ ಸಿವನಗುತ್ತಿ ಮಾತನಾಡಿದರು. ಕಾರ್ಯಾಧ್ಯಕ್ಷ ಡಾ. ಜಗದೀಶ ಚಂದ್ರಭೋಸ್ ಪ್ರಾಸ್ತಾವಿಕ ಮಾತನಾಡಿದರು. ಕೊಟ್ಟೂರು ತಾಲೂಕು ಪ.ಪೂ.ಕಾಲೇಜುಗಳ ಉಪನ್ಯಾಸಕ ಸಂಘದ ಅಧ್ಯಕ್ಷ ಗಂಟಿ ಶಿವಕುಮಾರ್ ಅಧ್ಯಕ್ಷತೆವಹಿಸಿದ್ದರು.

ಈ ವೇಳೆ 2023–24ನೇ ಸಾಲಿನಲ್ಲಿ ಉತ್ತಮ ಫಲಿತಾಂಶ ಪಡೆದ ಎಲ್ಲಾ ವಿಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷರು ಕೆ.ಎಂ ಜಯಣ್ಣ, ಸನ್ನಿಧಿ ಪಿಯು ಕಾಲೇಜ್ ಪ್ರಾಚಾರ್ಯರು ಸಂತೋಷ ಪಿ.ಟಿ, ಮಹಾದೇವ ಪಿಯು ಕಾಲೇಜ್ ಮಧುಸೂದನ್, ಮು.ವ.ವಿಜ್ಞಾನ ಪ.ಪೂ.ಕಾಲೇಜ್ ಕಂದಗಲ್ಲು ಉಮೇಶ್, ಕಾಲೇಜಿನ ಎಸ್ಡಿಎಂಸಿ ಸದಸ್ಯರು ಮಂಡಕ್ಕಿ ಪ್ರಕಾಶ್, ಕೋವಿ ನಾಗೇಂದ್ರಪ್ಪ, ಪಾರ್ವತಿ ಉಪನ್ಯಾಸಕರು ಸಿದ್ದೇಶ್, ಅನ್ನ ದಾನಿಗಳು ಶೇಷಗಿರಿ ಸೇರಿದಂತೆ ತಾಲೂಕಿನ ಎಲ್ಲಾ ಕಾಲೇಜ್ ಉಪನ್ಯಾಸಕರುಪಾಲ್ಗೊಂಡಿದ್ದರು. ಸುಷ್ಮಾ ಉಪನ್ಯಾಸಕಿ ಪ್ರಾರ್ಥಿಸಿದರು, ಉಪನ್ಯಾಸಕರಾದ ಕೆ.ಮೂಗಪ್ಪ ಸ್ವಾಗತಿಸಿದರು, ಜಿ.ಅಂಜಿನಪ್ಪ ನಿರೂಪಿಸಿದರು, ಗಂಟಿ ಶಿವಕುಮಾರ್ ವಂದಿಸಿದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Poem : 'The Song of India'

**1. Who are the two speakers in the poem 'The Song of India'? What do they want to speak about India? OR Sum up the conversation between the poet and the Motherland in your own words. OR Write the summary of the poem 'The Song of India'.**

**Ans :** The poet and the motherland are the two speakers in the poem 'The Song of India'. The poet wants to sing about the physical features of his motherland which has the Himalayas with snow born peaks and the three seas wash the palm of the motherland and the clear dawn with its pure golden lines. Whereas the motherland expects to listen the beggars and lepers who are swarming in the streets for their livelihood and about their filth and dirty that foul her seclusioned forests. The poet wants to sing about rock cut temples, epics in stone, the seers, prophets, and their contributions. But she urges to sing about the millions of people are toiling as the slaves without self reliance with wrinkled faces. Helpless children were born in a bleak and dark home. She stresses to sing about the iron men who fought for the freedom and struggled to overcome the social evils. Finally the motherland urges to sing about the future of India.

### Supplementary Reading

## On the Top of the World

Most important 2 marks questions and answers.

**1. Why do you think that Dicky Dolma's life as a girl was sorrowful? OR What was the biggest headache of Dicky Dolma besides her physical and mental problems? OR What hardships did Dicky Dolma face in her early life?**

**Ans :** Dicky Dolma was born in a very poor family. When she was only 11 years, she lost her mother and a little later she lost her elder brother too. Financial situation was her biggest headache as her father was bedridden and a lot of money was needed for the treatment. The family was unable to offer even fee for her mountaineering course. She had suffered and experienced hardships at an early stage.

**2. What factors encouraged Dolma to take up the basic mountaineering course?**

**Ans :** Dolma came to know that a mountaineering institute was set up at Manali, and it would give training to those who were interested in climbing mountains. Her friends and her family members also encouraged her to join this course. She had one track mind and always ready to face hardships.

**3. How has Dolma described her preparedness for the task of scaling Mount Everest? OR Taking up mountaineering was not a difficult decision for Dicky Dolma. Justify. OR "With zeal and determination, we can achieve anything." How do you relate this with the life of Dolma? OR What qualities of Dicky Dolma led her to realize her dream**

**Ans :** Though Dicky Dolma suffered a lot of hardships in her childhood, she had zeal to scale the Mt. Everest. She scaled the Mt. Everest on May 10.1993. She felt that she had the whole world at her feet. Dolma got training in the mountaineering institute at Manali. Her determination and hard work helped her to secure 'A' grades. She used to practice four hours every day. She had one track mind and always ready to face hardships. She believed that success always follows dedication, determination, and hard work.

**4. How did Dicky Dolma feel after scaling the Mt. Everest?**

**Ans :** Dicky Dolma scaled the Mt. Everest on May 10.1993. She felt that she had the whole world at her feet literally. The view from above was something that only an Everester would understand. It was much more breathtaking than she could ever have imagined. The entire National and State awards that she had been bestowed with were nothing compared to the experiences seeing that view.

5. What can we learn from Dolma's life?

Ans : Whenever hurdles come, we must face them boldly. We should learn to face the brute. We should be the hard workers but not be the shirkers. We should always be ready to face the challenges of life.

ನಿನ್ನ ಏಳಿಗೆಗೆ ನೀನೆ ಶಿಲ್ಪಿ । ಗುರಿ ತಲುಪುವವರೆಗೆ ಪರಿಶ್ರಮ ನಿರಂತರವಾಗಿರಲಿ

Prepared by : R B Gurubasavaraj Asst Teacher. GHS Basarakodu. HB Halli Taluk, Vijayanagara Dist.

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055